# ಅನಂತಪಥ

ANANTHKUMAR PRATISHTHANA

ನಾನು ಕಂಡಂತೆ ಅನಂತಕುಮಾರ್
ಕಾರ್ಯಕರ್ತರಿಗೆ
ನಿರಂತರ ಪ್ರೇರಣಾಶಕ್ತಿ
ಅರವಿಂದ್ ಲಿಂಬಾವಳಿ ಪುಟ 2



ಸಂಪುಟ - 2 | ಜುಲೈ - 2022 | ಸಂಚಿಕೆ - 25


# ವಿದ್ಯಾರ್ಥಿ ಹೋರಾಟಗಳ ಮುಂಚೂಣಿಯಲ್ಲಿ ಅನಂತಕುಮಾರ್



1970-80ರ ದಶಕದ ಸಂದರ್ಭ ವಿದ್ಯಾರ್ಥಿ ಸಮುದಾಯವನ್ನು ವ್ಯಾಪಕವಾಗಿ ಕಾಡುತ್ತಿದ್ದ ಒಂದು ಸಮಸ್ಯೆ ರ್‍ಯಾಗಿಂಗ್ .ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಂತೂ ಇದೊಂದು ಪಿಡುಗಾಗಿ ಪರಿಣಮಿಸಿತ್ತು. ಈ ರ್‍ಯಾಗಿಂಗ್ ನಿವಾರಣೆಗೆ ವಿದ್ಯಾರ್ಥಿ ಪರಿಷತ್ತು ವಿಶೇಷವಾಗಿ ಶ್ರಮಿಸುತ್ತಿತ್ತು. ವಿದ್ಯಾರ್ಥಿ ನಾಯಕರಾಗಿ ಅನಂತಕುಮಾರ್ ಈ ರ್‍ಯಾಗಿಂಗ್ ವಿರುದ್ಧ ಜಾಗೃತಿ ಮೂಡಿಸುವಲ್ಲಿ ಹುಬ್ಬಳ್ಳಿ ಧಾರವಾಡಗಳಲ್ಲಿ ವಿಶೇಷ ಪಾತ್ರ ವಹಿಸಿದ್ದರು. ರ್‍ಯಾಗಿಂಗ್‌ಗೆ ಒಳಗಾದ ವಿದ್ಯಾರ್ಥಿಗಳಿಗೆ ಪರಿಷತ್ತು ಒಂದು ಆಶ್ರಯಸ್ಥಾನವಾಗುತ್ತಿತ್ತು. ಆ ಹುಡುಗರಿಗೆ ತೊಂದರೆಯಾಗದಂತೆ ಆಶ್ವಾಸನೆ ಕೊಡುವುದೊಂದು ಕ್ರಮ. ಹೊಸ ವಿದ್ಯಾರ್ಥಿಗಳನ್ನು ಸ್ವಾಗತ ಮಾಡುವಂಥ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಇನ್ನೊಂದು ರೀತಿ. ರ್‍ಯಾಗಿಂಗ್ ಪಿಡುಗಿನ ನಿವಾರಣೆಯಲ್ಲಿ ಇವೆರಡೂ ಕೆಲಸಗಳು ಪರಿಣಾಮಕಾರಿಯೆನಿಸಿದವು.

ಇದರಂತೆಯೇ ಡ್ರಗ್ಸ್ ಮಾಫಿಯಾದ ಹಾವಳಿ ಕಾಲೇಜು ಕ್ಯಾಂಪಸ್ಸುಗಳನ್ನು ಕಂಗೆಡಿಸತೊಡಗಿತ್ತು. ಆಗ ಪರಿಷತ್ತು ಕೈಗೊಂಡ ಒಂದು ಅಧ್ಯಯನದ ಪ್ರಕಾರ ಶೇ. 20ರಷ್ಟು ವಿದ್ಯಾರ್ಥಿಗಳು ಗಾಂಜಾ, ಅಫೀಮು ಮತ್ತಿತರ ಡ್ರಗ್ಸ್ ಸೇವನೆಗೆ ಮಾರುಹೋಗುತ್ತಾರೆಂದು ತಿಳಿದು ಬಂದಿತು. ಅನಂತಕುಮಾರ್ ನೇತೃತ್ವದಲ್ಲಿ ವಿವಿಧ ಕಾಲೇಜುಗಳಿಗೂ, ಕಾಲೇಜು ಹಾಸ್ಟೆಲ್ ಗಳಿಗೂ ಪರಿಷತ್ತಿನ ಸದಸ್ಯರು ಭೇಟಿಕೊಟ್ಟು ಡ್ರಗ್ಸ್ ಹಾವಳಿಯ ವಿರುದ್ಧ ಜಾಗೃತಿ ಮೂಡಿಸಲು ಪ್ರಯತ್ನಿಸುತ್ತಿದ್ದರು. ಅಂತಹ ಕಡೆಗಳಲ್ಲಿ ಅನಂತಕುಮಾರ್ ಭಾಷಣ ಮಾಡಿ ಡ್ರಗ್ಸ್ ಸೇವನೆಯ ಮಾರಕ ಪರಿಣಾಮಗಳನ್ನು ತಿಳಿಯ ಹೇಳುತ್ತಿದ್ದರು.

1977 ರಿಂದ 1987ರವರೆಗಿನ ದಶಕದಲ್ಲಿ ನಡೆದ ವಿದ್ಯಾರ್ಥಿ ಆಂದೋಲನಗಳಿಗೆ ವಿಶೇಷವಾಗಿ ಚಾಲನೆ ನೀಡಿದವರು ಅನಂತಕುಮಾರ್.



ಘೋಷಣೆಗಳನ್ನು ಸೃಷ್ಟಿಸುವುದರಿಂದ ಮೊದಲುಗೊಂಡು ಪತ್ರಿಕಾ ಹೇಳಿಕೆಗಳವರೆಗೆ ಅನಂತಕುಮಾರರ ವಿಶಿಷ್ಟತೆ ಎದ್ದು ತೋರುವ ಹಾಗಿತ್ತು. "ವಿಧಾನಸೌಧದ ಗದ್ದುಗೆದಾರರೇ ಕಣ್ಣು ಬಿಡಿ, ಕಿವಿಯ ಕೊಡಿ" ಎಂಬುದು ಇಂಥ ವಿಶಿಷ್ಟವಾದ ಹಲವಾರು ಘೋಷಣೆಗಳಲ್ಲೊಂದು. ಶಿಕ್ಷಣ ಉಳಿಸಿ ಆಂದೋಲನ ನಡೆಯುತ್ತಿದ್ದ ಆ ಸಂದರ್ಭದಲ್ಲಿ ಒಂದು ಪತ್ರಿಕಾ ಹೇಳಿಕೆ ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ಬಾಕ್ಸ್ ಕಾಲಮ್ ರೂಪದಲ್ಲಿ ಪ್ರಕಟವಾಗಿತ್ತು. ನಾವೆಲ್ಲರೂ ಶ್ವೇತಪತ್ರವನ್ನು ಓದುತ್ತಿರುತ್ತೇವೆ. ಇದೀಗ ವಿದ್ಯಾರ್ಥಿ ಪರಿಷತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಕರಾಳ ಪತ್ರ ಎಂದರೆ ಬ್ಲ್ಯಾಕ್ ಪೇಪರ್ ಅನ್ನು ಬಿಡುಗಡೆ ಮಾಡುವ ಸಂದರ್ಭ ಬಂದಿದೆ ಎಂದು ಆ ಹೇಳಿಕೆ. ಹೀಗೆ ಶ್ವೇತಪತ್ರದಂತೆ ಕಪ್ಪುಪತ್ರವನ್ನೂ ಜನಬಳಕೆಗೆ ತಂದವರು ಅನಂತಕುಮಾರ್ ಮುಂದಿನ ಅನೇಕ ವಿದ್ಯಾರ್ಥಿ ಹೋರಾಟಗಳಿಗೆ ಪರಿಷತ್ತಿನ ಆಂದೋಲನ ಸ್ಫೂರ್ತಿ ನೀಡಿತು. ಉದಾಹರಣೆಗೆ, ಕರ್ನಾಟಕದಲ್ಲೇ ಪಾಲಿಟೆಕ್ನಿಕ್ ಶಿಕ್ಷಣಸಂಸ್ಥೆಗಳು, ಇಂಜಿನಿಯರಿಂಗ್ ಕಾಲೇಜುಗಳು ಮೊದಲಾದ ಸಂಘಟನೆಗಳ ಹೋರಾಟಗಳಿಗೆ ವಿದ್ಯಾರ್ಥಿ ಪರಿಷತ್ತಿನ ಆ ಕಾಲದ ಆಂದೋಲನ ಮಾದರಿಯಾಯಿತು.

ಬೆಂಗಳೂರಿನಲ್ಲಿ ನಡೆದ ಪ್ರಾಂತ್ಯ ಅಧಿವೇಶನಕ್ಕೆ ಪೂರ್ವಭಾವಿಯಾಗಿ ಭದ್ರಾವತಿಯ ವಿಶ್ವೇಶ್ವರಯ್ಯ ಕಾಲೇಜಿನಲ್ಲಿ ನಡೆದ ಬೈಠಕ್ ಅನ್ನು ಉದ್ದೇಶಿಸಿ ಮಾತನಾಡುವಾಗ ಅನಂತಕುಮಾರ್ ಮುಂದಿನ ಪ್ರಾಂತ್ಯ ಅಧಿವೇಶನ ನಡೆಸುವ ಉದ್ದೇಶವನ್ನು ವಿವರಿಸುತ್ತ "ವಿದ್ಯಾರ್ಥಿ ಪರಿಷತ್ತು ಕಳೆದ ಹತ್ತು ವರುಷಗಳಲ್ಲಿ ಕರ್ನಾಟಕದ ಪ್ರತಿಯೊಬ್ಬ ವಿದ್ಯಾರ್ಥಿಗೂ ಪರಿಚಯವಿರುವ ಒಂದು ಸಂಘಟನೆಯಾಗಿ ರೂಪಿಸಲು ನಾವೆಲ್ಲರೂ ಶ್ರಮಿಸಿದ್ದೇವೆ.

ಪುಟ 6 ರಲ್ಲಿ ಮುಂದುವರೆದಿದೆ

### ಅನಂತಕುಮಾರರ ನೇತೃತ್ವದಲ್ಲಿ ಅಭಾವಿಪ ಹೋರಾಟ

- ಖಾಸಗಿ ಕಾಲೇಜುಗಳ ಕ್ಯಾಪಿಟೇಶನ್ ಹಾವಳಿ ವಿರುದ್ಧ
- ಅಶ್ಲೀಲ ಭಿತ್ತಿ ಪತ್ರಗಳ ವಿರುದ್ಧ
- ಸಕಾಲದಲ್ಲಿ ಪರೀಕ್ಷೆ ನಡೆಸಲು ಒತ್ತಾಯ
- ವೈದ್ಯಕೀಯ ಕಾಲೇಜು ಮತ್ತು ನರ್ಸಿಂಗ್ ಕಾಲೇಜುಗಳ ಸಮಸ್ಯೆ
- ಚಂದ್ರಗುತ್ತಿ ಬೆತ್ತಲೆ ಮೆರವಣಿಗೆಯ ವಿರುದ್ಧ

### ವಿಶೇಷ ಉಪಕ್ರಮಗಳು

- ವಿವೇಕಾನಂದ ಜಯಂತಿ - ರಚನಾತ್ಮಕ ಕೆಲಸಗಳ ದಿನ
- CET ತರಬೇತಿ, ವ್ಯಕ್ತಿವಿಕಾಸ ತರಬೇತಿ
- ನಗರ, ಜಿಲ್ಲಾ, ರಾಜ್ಯಮಟ್ಟದ ಅಭ್ಯಾಸ ವರ್ಗಗಳು
- TEAM ಪರಿಕಲ್ಪನೆ
- ಬೃಹತ್ ಸಮ್ಮೇಳನಗಳು
- ಕರಾಳ ಪತ್ರದ ವಿನೂತನ ಪ್ರಯೋಗ
- ದೊಡ್ಡ ಮಟ್ಟದಲ್ಲಿ ವಿದ್ಯಾರ್ಥಿನಿಯರ ಸಂಘಟನೆ



**"ಆಜ್ ಪೂರೇ ಭಾರತ್ ಮೇ ಜೋ ಭೀ ಭಾರತೀಯ ಜನತಾ ಪಕ್ಷ್ ಮೇ ಉಚ್ಚ್ ನೇತಾ ಹೈಂ, ಉನ್ ಸಬ್ ಕೀ ಬಯೋಗ್ರಾಫಿ ಮೇ ಅನಂತ್‌ಜೀ ಹೈ."**

ಇತ್ತೀಚಿಗೆ ಕರ್ನಾಟಕಕ್ಕೆ ಆಗಮಿಸಿದ್ದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ತಮ್ಮನ್ನು ಭೇಟಿ ಮಾಡಿದ ಶ್ರೀಮತಿ ತೇಜಸ್ವಿನಿ ಅನಂತಕುಮಾರರೊಡನೆ ಹೇಳಿದ ಮಾತುಗಳು

# ಕಾರ್ಯಕರ್ತರಿಗೆ ನಿರಂತರ ಪ್ರೇರಣಾಶಕ್ತಿ

- ಅರವಿಂದ್ ಲಿಂಬಾವಳಿ ಶಾಸಕರು ಹಾಗೂ ಮಾಜಿ ಸಚಿವರು

ಭಾರತೀಯ ಜನತಾ ಪಾರ್ಟಿಗಾಗಿ ಹಗಲು ರಾತ್ರಿಯೆನ್ನದೆ ಕಾರ್ಯಪ್ರವೃತ್ತರಾಗಿ, ಶಿಸ್ತುಬದ್ಧವಾಗಿ ಶ್ರಮಿಸಿದ ನಾಯಕರಲ್ಲಿ ಅನಂತಕುಮಾರರು ಒಬ್ಬರು. ಬಿಜೆಪಿ ಎಂದಾಗ ನನಗೆ ಮೊದಲು ನೆನಪಾಗುವುದು ಅನಂತಕುಮಾರ್. ಅಷ್ಟರ ಮಟ್ಟಿಗೆ ಅನಂತಕುಮಾರ್ ಕಾರ್ಯಕರ್ತರ ಜೊತೆ ಬೆರೆತು, ಪಕ್ಷಕ್ಕಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ.

ನಾನು ಕಂಡಂತೆ



ಅನಂತಕುಮಾರ್

ಶಿವಾಜಿ ಮಹಾರಾಜರ ಸಾಮ್ರಾಜ್ಯದಂತೆ, ಬಿಜೆಪಿ ಸಾಮ್ರಾಜ್ಯವನ್ನು ರಾಜ್ಯದಲ್ಲಿ ಕಟ್ಟಬೇಕು, ವಿಧಾನಸೌಧದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದು, ವಿಧಾನಸೌಧದಲ್ಲಿ ಕುಳಿತು ಜನಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸುವಂತಾಗಬೇಕೆಂದು ಅನಂತಕುಮಾರ್ ಕನಸು ಕಂಡಿದ್ದರು. ಇಂತಹ ವ್ಯಕ್ತಿಯ ಜೊತೆಗೆ ನನ್ನ ಒಡನಾಟ ಶುರುವಾಗಿದ್ದೇ ಒಂದು ರೋಚಕ ಸಂಗತಿ. ಅನಂತಕುಮಾರ್ ವಿದ್ಯಾರ್ಥಿ ಪರಿಷತ್ತಿನ ಬಲವರ್ಧನೆಗಾಗಿ ಬಾಗಲಕೋಟೆಗೆ ಆಗಾಗ ಬರುತ್ತಿದ್ದರು. ಸಾಮಾನ್ಯವಾಗಿ, ಮಧ್ಯರಾತ್ರಿ 12.30ರ ಗೋಲ್‌ಗುಂಬಜ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಬರುತ್ತಿದ್ದರು. ನಾನು ಅವರನ್ನು ಸ್ಟೇಷನ್ ನಲ್ಲಿ ಸ್ವಾಗತಿಸುತ್ತಿದ್ದೆ. ಅಲ್ಲಿಂದ ವಿದ್ಯಾರ್ಥಿ ಪರಿಷತ್ತಿನ ಕಾರ್ಯಾಲಯದ ಮೊದಲನೇ ಮಹಡಿಯ ಶಾರದಾ ಪ್ರಿಂಟಿಂಗ್ ಪ್ರೆಸ್ ನಲ್ಲಿ ಸ್ವಲ್ಪ ಸಮಯ ವಿಶ್ರಾಂತಿ ಪಡೆದು, ನಂತರ ಮುಂಜಾನೆ ನನಗೊಂದು ಅವರಿಗೊಂದು ಬಾಡಿಗೆಗೆ ಸೈಕಲ್ ಪಡೆದು, ಬಾಗಲಕೋಟೆಯ ಪ್ರಮುಖ ಸ್ಥಳಗಳಿಗೆ ಪ್ರವಾಸ ಹೊರಡುತ್ತಿದ್ದೆವು. ಅಲ್ಲಿನ ಸ್ಥಿತಿಗತಿಗಳನ್ನು ಅವಲೋಕನ ಮಾಡಿದ ನಂತರ ಅವರು ಪುನಃ ಹುಬ್ಬಳ್ಳಿಗೆ ತೆರಳುತ್ತಿದ್ದರು. ಒಂದು ಕ್ಷಣವನ್ನೂ ವ್ಯರ್ಥಮಾಡದೆ ಕಾರ್ಯನಿರತರಾಗಿರುವ ಅನಂತಕುಮಾರ್, ಅಂದಿನಿಂದಲೂ ನಮ್ಮೆಲ್ಲರ ಪ್ರೇರಣಾ ಶಕ್ತಿಯಾಗಿದ್ದರು.

## ವಿದ್ಯಾರ್ಥಿ ಪರಿಷತ್ ಮತ್ತು ಅನಂತಕುಮಾರ್

ಇಂದು ತೇಜಸ್ವಿನಿ ಅನಂತಕುಮಾರರು ಸಸಿಗಳನ್ನು ನೆಟ್ಟು ಬೆಳೆಸುತ್ತಿರುವಂತೆ ಅಂದು ಅನಂತಕುಮಾರ್ ಯುವಶಕ್ತಿಗಳೆಂಬ ಸಸಿಗಳನ್ನು ವಿದ್ಯಾರ್ಥಿ ಪರಿಷತ್ತಿಗೆ ತಂದು ನೆಟ್ಟು ನೀರೆರೆದು ಬೆಳೆಸುತ್ತಿದ್ದರು. ಯುವಕರನ್ನು ವಿದ್ಯಾರ್ಥಿ ಪರಿಷತ್ತಿಗೆ ಕರೆತಂದು ಅವರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವ ಕೆಲಸವನ್ನು ಅನಂತಕುಮಾರರು ಮಾಡುತ್ತಿದ್ದರು. ಅದಕ್ಕಾಗಿ ಅವರು ರಾಜ್ಯದಾದ್ಯಂತ ಪ್ರವಾಸ ಕೈಗೊಂಡು ಯುವಕರನ್ನು ಸಂಘಟಿಸುತ್ತಿದ್ದರು.

1985ರ ವರ್ಷವನ್ನು ರಾಷ್ಟ್ರೀಯ ಯುವ ವರ್ಷವೆಂದು ಘೋಷಿಸಿ, ದೆಹಲಿಯಲ್ಲಿ ಬೃಹತ್ ಸಮ್ಮೇಳನವನ್ನು ಕೇಂದ್ರದ ನಾಯಕರು ಆಯೋಜನೆ ಮಾಡಿದ್ದರು. ಆ ಸಮ್ಮೇಳನದ ಉದ್ಘಾಟನೆಯನ್ನು ವಾಜಪೇಯಿ ಅವರು ನೆರವೇರಿಸಿದ್ದರು. ಅದೇ ವರ್ಷ, ಕರ್ನಾಟಕದಲ್ಲಿಯೂ ಅನಂತಕುಮಾರರ ನೇತೃತ್ವದಲ್ಲಿ ಯುವ ವರ್ಷವನ್ನು ಅದ್ದೂರಿಯಾಗಿ ಆಚರಣೆ ಮಾಡಲಾಗಿತ್ತು.

ಅನಂತಕುಮಾರರು ವಿದ್ಯಾರ್ಥಿ ಪರಿಷತ್ತಿನ ಕಾರ್ಯದರ್ಶಿಯಾಗಿದ್ದಾಗ ವಿದ್ಯಾರ್ಥಿಗಳನ್ನು ಸಂಘಟಿಸಿ, ಅವರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಿದ ರೀತಿಯನ್ನು ಗಮನಿಸಿದ ಭಾರತೀಯ ಜನತಾ ಪಕ್ಷದ ವರಿಷ್ಠರು, ಅನಂತಕುಮಾರರನ್ನು ವಿದ್ಯಾರ್ಥಿ ಪರಿಷತ್ತಿನಿಂದ ಭಾರತೀಯ ಜನತಾ ಪಕ್ಷಕ್ಕೆ ಆಹ್ವಾನಿಸಿದರು. ನಂತರ 1987ರಲ್ಲಿ ಬಿಜೆಪಿಗೆ ಅಧಿಕೃತವಾಗಿ ಸೇರ್ಪಡೆಗೊಂಡರು. ಆಗ ಬಾಗಲಕೋಟೆಯ ವಿದ್ಯಾರ್ಥಿ ಪರಿಷತ್ತಿನಿಂದ ನಗರದ ಪಾಲಿಟೆಕ್ನಿಕ್ ಕಾಲೇಜಿನ ಆವರಣದಲ್ಲಿ ಅನಂತಕುಮಾರರಿಗೆ ಅದ್ದೂರಿ ಸಮಾರಂಭವನ್ನು ಏರ್ಪಡಿಸಿ ಬೀಳ್ಕೊಡಲಾಯಿತು.

## ಅನಂತಕುಮಾರ್ ಜೊತೆ ನನ್ನ ಒಡನಾಟ

ರಾಜ್ಯದಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ನಡೆಯುತ್ತಿದ್ದ ಅವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ ವರದಿ ಮಾಡಲು ಸಮರ್ಥ ಯುವನಾಯಕರನ್ನು ಹುಡುಕುತ್ತಿರುವ ಸಂದರ್ಭದಲ್ಲಿ ಅನಂತಕುಮಾರರು ನನ್ನನ್ನು ಬಾಗಲಕೋಟೆಯಿಂದ ಬೆಂಗಳೂರಿಗೆ ಕರೆಯಿಸಿ ಎಸ್ ಜೆ ಪಿ ಇಂಜನಿಯರಿಂಗ್ ಕಾಲೇಜಿಗೆ ಸೇರಿಸಿ, ಅಲ್ಲಿನ ಜವಾಬ್ದಾರಿಯನ್ನು ನನಗೆ ವಹಿಸಿದರು. ಕರ್ನಾಟಕ ರಾಜಕೀಯ ಕ್ರಿಯಾ ಸಮಿತಿಯೊಂದನ್ನು ರಚಿಸಿ ನನ್ನನ್ನು ಹಾಗೂ ಎಸ್ ಜೆ ಪಿ ಕಾಲೇಜಿನ ಹಿರಿಯ ವಿದ್ಯಾರ್ಥಿಯಾದ ಟಿ. ಲೋಕಪ್ರಕಾಶ್‌ರನ್ನು ಅದರ ಸಂಚಾಲಕ ಮತ್ತು ಸಹಸಂಚಾಲಕರೆಂದು ನಿಯುಕ್ತಿಗೊಳಿಸಿ ಬೆಂಗಳೂರಿನ ಎಸ್ ಜೆ ಪಿ ಪಾಲಿಟೆಕ್ನಿಕ್ ಕಾಲೇಜಿನ ಆವರಣದಲ್ಲಿ ಎಲ್ಲ ಕಾಲೇಜು ವಿದ್ಯಾರ್ಥಿಗಳ ಸಮ್ಮುಖದಲ್ಲಿ ಘೋಷಣೆ ಮಾಡಿದರು. ನನಗಿಂತ ನಾಲ್ಕೈದು ವರ್ಷ ಸೀನಿಯರ್ ಜೊತೆ ಕೆಲಸ ಮಾಡುವುದು ಹೇಗೆಂಬ ಹಿಂಜರಿಕೆಯಿಂದ ಕಾಲೇಜಿನ ಕಡೆ ತಲೆಯನ್ನೇ ಹಾಕದಿದ್ದಾಗ ಅನಂತಕುಮಾರರು ಕರೆದು “ಎಲ್ಲಪ್ಪ, ಮೂರ್ನಾಲ್ಕು ದಿನದ ವರದಿ?” ಎಂದು ಕೇಳಿದ್ದರು. ನನ್ನ ಹಿಂಜರಿಕೆಯನ್ನು ಗಮನಿಸಿದ ಅವರು ಅಂದು ಆಡಿದ ಮಾತು ಇಂದಿಗೂ ನನಗೆ ದಾರಿದೀಪದಂತಿದ್ದು ನನ್ನನ್ನು ಮಹದೇವಪುರದ ಶಾಸಕನಾಗುವ ವರೆಗೆ ತಂದು ನಿಲ್ಲಿಸಿದೆ.

ವರ್ಷದ ತರುವಾಯ ಕಾಲೇಜಿನ ಅವ್ಯವಸ್ಥೆಯನ್ನು ಕುರಿತು ವರದಿಯನ್ನು ಸಿದ್ಧಪಡಿಸಿ ಅನಂತಕುಮಾರರಿಗೆ ಸಲ್ಲಿಸಿದೆ. ವಿಷಯವನ್ನು ಪಕ್ಷದ ವರಿಷ್ಠರಿಗೆ ತಿಳಿಸಲು ಕರಾಳಪತ್ರವೊಂದನ್ನು ಸಿದ್ಧಪಡಿಸಿದ ಅನಂತಕುಮಾರ್ ಅದನ್ನು ಬರೆಯಲು ಅಂದು ಕಪ್ಪು ಬಣ್ಣದ ಕಾಗದವನ್ನೇ ಬಳಸಿದ್ದರು. ಕಪ್ಪು ಹಾಳೆಯ ಬಳಕೆಯ ಕಲ್ಪನೆಯೇ ವಿನೂತನವಾಗಿತ್ತು. ಇದು ಪತ್ರಕರ್ತ ಲಂಕೇಶರ ಗಮನಕ್ಕೂ ಬಂದು ಅವರು ಪತ್ರದ ಒಂದು ಭಾಗವನ್ನು ತಮ್ಮ ಪತ್ರಿಕೆಯಲ್ಲಿಯೂ ಪ್ರಕಟಿಸಿದರು.

## ಬಿಜೆಪಿಗೆ ಅನಂತಕುಮಾರ್‌ಎಂಬ ಮಾಣಿಕ್ಯದ ಸೇವೆ ಅಪಾರ

ತಮ್ಮ ವೈಯಕ್ತಿಕ ಬದುಕಿಗೆ ನೀಡಿದ್ದಕ್ಕಿಂತ ಹೆಚ್ಚು ಸಮಯವನ್ನು ಅನಂತಕುಮಾರ್ ಪಕ್ಷ ಮತ್ತು ಸಮಾಜಕ್ಕೆ ನೀಡಿದರು. ಕೃಷ್ಣಭಟ್ಟರ ಶಿವಮೊಗ್ಗದ ಮನೆಯಲ್ಲಿ ಅನಂತಕುಮಾರ್, ದತ್ತಾಜೀ ಮತ್ತು ಭಟ್ಟರ ನಡುವೆ ರಾತ್ರಿ 1.30 ಸಮಯದವರೆಗೂ ಪಕ್ಷದ ವಿಚಾರವಾಗಿ ಚರ್ಚೆ ನಡೆಯುತ್ತಿದ್ದುದನ್ನು ನಾನು ನೋಡಿದ್ದೇನೆ. ಅವರು ಪಕ್ಷವನ್ನು ಕಟ್ಟಿ ಬೆಳೆಸಲು ಅಹೋರಾತ್ರಿ ಬದ್ಧತೆಯಿಂದ ಶ್ರಮಿಸುತ್ತಿದ್ದರು. ಯಾವುದೇ ಸೌಲಭ್ಯವಿಲ್ಲದ ಕಾಲದಲ್ಲಿ ರಾಜ್ಯದ ಮೂಲೆಮೂಲೆಗಳಿಗೆ ಬಸ್, ರೈಲು ಮತ್ತು ಸೈಕಲ್ ಮೂಲಕವೇ ಪ್ರಯಾಣ ಮಾಡಿ ಬೆಳೆಸಿದ ಪಕ್ಷವು ಇಂದು ‘ಜಗನ್ನಾಥ ಭವನ (ಬಿಜೆಪಿ ಕಾರ್ಯಾಲಯ)’ದ ವರೆಗೆ ಬೆಳೆದು ನಿಂತಿದೆ.

ಅನಂತಕುಮಾರ್ ಮತ್ತು ಯಡಿಯೂರಪ್ಪನವರು ಬಿಜೆಪಿಯ ಎರಡು ಆಧಾರ ಸ್ತಂಭಗಳು. ಆರಂಭಿಕ ದಿನಗಳಲ್ಲಿ ಯಡಿಯೂರಪ್ಪನವರ ಸರಕಾರಿ ನಿವಾಸದ ಎರಡು ಅಂತಸ್ತುಗಳಲ್ಲಿ ಅವರಿಬ್ಬರೂ ವಾಸ ಮಾಡುತ್ತಿದ್ದರು. ಇದು ಬಿಜೆಪಿ ಬೆಳವಣಿಗೆಗಾಗಿ ಚಿಂತಿಸಿ ಕಾರ್ಯಪ್ರವೃತ್ತರಾಗಲೂ ಈ ದಿಗ್ಗಜ ನಾಯಕರಿಗೆ ಅನುಕೂಲ ಕಲ್ಪಿಸಿತು.

ಅನಂತಕುಮಾರರು ನನ್ನನ್ನು ಎಬಿವಿಪಿಯಿಂದ ಭಾರತೀಯ ಜನತಾ ಪಾರ್ಟಿಗೆ ಕರೆತಂದು, ರಾಜ್ಯ ಪ್ರಧಾನ ಕಾರ್ಯದರ್ಶಿಯ ಜವಾಬ್ದಾರಿಯನ್ನು ವಹಿಸಿದರು. ಅವರು ಸ್ಥಳೀಯ ಸಂಸ್ಥೆಗಳ ಚುನಾವಣೆಯ ಜವಾಬ್ದಾರಿಯನ್ನು ನನಗೆ ನೀಡಿದಾಗ ನನ್ನ ರಾಜಕೀಯ ಜೀವನದ ಮೊದಲ ಮೈಲಿಗಲ್ಲು ಪ್ರಾರಂಭವಾಯಿತು. “ಅರವಿಂದ ಲಿಂಬಾವಳಿ ಮಾಡು ಇಲ್ಲವೇ ಮಡಿ ಎಂಬ ಪ್ರವೃತ್ತಿಯ ವ್ಯಕ್ತಿ” ಎಂದು ನನ್ನ ಬಗ್ಗೆ ಅನಂತಕುಮಾರರು ಪ್ರಶಂಸೆ ವ್ಯಕ್ತಪಡಿಸಿದ್ದರು. ತಮ್ಮ ಸಾಮರ್ಥ್ಯದ ಬಗ್ಗೆ ಶಂಕೆ ಹೊಂದಿರುವ ಕಾರ್ಯಕರ್ತರಲ್ಲಿ ತಮ್ಮ ಆತ್ಮೀಯ ಮತ್ತು ಅನೌಪಚಾರಿಕ ವರ್ತನೆಯಿಂದ ವಿಶ್ವಾಸ ತುಂಬುವುದು, ಎಂತಹ ಬಿಗು ವಾತಾವರಣವನ್ನೂ ಚುಟುಕುಗಳು ಮತ್ತು ಹಾಸ್ಯ ಪ್ರಸಂಗಗಳ ಮೂಲಕ ತಿಳಿಗೊಳಿಸುವುದು ಅನಂತಕುಮಾರರಿಗೆ ಕರತಲಾಮಲಕ. ನನ್ನಂತಹ ಅನೇಕ ಕಾರ್ಯಕರ್ತರು ಅವರಿಂದ ಸ್ಫೂರ್ತಿ ಪಡೆದು ರಾಜಕೀಯದಲ್ಲಿ ಉತ್ತಮ ನಾಯಕರಾಗಿ ಗುರುತಿಸಿಕೊಂಡಿದ್ದಾರೆ.

ಅಂದಂದಿನ ಕೆಲಸವನ್ನು ಅಂದಂದೇ ಮುಗಿಸುವುದು ಅನಂತಕುಮಾರರ ಜೀವನದ ಶಿಸ್ತು. ತಡರಾತ್ರಿಯ ವರೆಗೂ ಕೆಲಸ ಮಾಡುವ ಅವರು ಕೆಲವೊಮ್ಮೆ ಮಧ್ಯರಾತ್ರಿ ಒಂದು ಗಂಟೆಗೂ ನಮಗೆ ಕರೆ ಮಾಡಿ ವರದಿ ಕೇಳುವುದಿತ್ತು. 2004 ರಲ್ಲಿ ಪಕ್ಷವು ಬಿಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾಗ ಅನಂತಕುಮಾರರು ದೃಢವಾಗಿ ಪಕ್ಷವನ್ನು ಮುನ್ನಡೆಸಿದರು. ಅವರು ಪಕ್ಷದ ಹಿರಿಯ ನಾಯಕರು ಮತ್ತು ಕಾರ್ಯಕರ್ತರೊಡನೆ ಉತ್ತಮ ಸಂಪರ್ಕವಿರಿಸಿಕೊಂಡು ಅಜಾತಶತ್ರುವಿನಂತೆ ಪಕ್ಷದ ಸೀಮೆಗಳನ್ನು ವಿಸ್ತರಿಸಿದರು.




ಅನಂತಪಥ ಮಾಸಪತ್ರಿಕೆಯ 24 ನೇ ಸಂಚಿಕೆಯನ್ನು ಕರ್ನಾಟಕ ಸರ್ಕಾರದ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಅರವಿಂದ್ ಲಿಂಬಾವಳಿಯವರು 22 ಜೂನ್ 2022 ರಂದು ಬಿಡುಗಡೆ ಮಾಡಿದರು.

ತಮ್ಮ ಆರೋಗ್ಯ ಹದಗೆಟ್ಟು ಶೋಚನೀಯ ಸ್ಥಿತಿ ತಲುಪಿದಾಗಲೂ ಅವರು ಪಕ್ಷ ಮತ್ತು ಜನಸಾಮಾನ್ಯರ ಹಿತಚಿಂತನೆಯಲ್ಲಿ ತೊಡಗಿಕೊಂಡಿದ್ದರು. ಕೊನೆಯುಸಿರಿನವರೆಗೂ ಪಕ್ಷವು ವಹಿಸಿದ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಇತರರಿಗೂ ಮಾದರಿಯಾಗಿ ಬದುಕಿದರು. ಅನಂತಕುಮಾರರು ನಮ್ಮ ನೆನಪಿನ ಭಾಗವಾಗಿ ಎಂದೆಂದಿಗೂ ಉಳಿದುಕೊಂಡಿರುತ್ತಾರೆ ಎಂದರೆ ಅದು ಅತಿಶಯೋಕ್ತಿಯಲ್ಲ. ಅನಂತಕುಮಾರರ ಯಶಸ್ವೀ ರಾಜಕೀಯ ಜೀವನದಲ್ಲಿ ತೇಜಸ್ವಿನಿ ಅನಂತಕುಮಾರರ ಪಾತ್ರ ಅತಿದೊಡ್ಡದು. ಅನಂತಕುಮಾರರ ಎಲ್ಲ ಸಮಾಜಮುಖಿ ಕೆಲಸಗಳ ಜವಾಬ್ದಾರಿಯನ್ನು ವಹಿಸಿಕೊಂಡು ಸಮರ್ಥವಾಗಿ ನಿರ್ವಹಿಸಿರುವ ಅವರು ಅನಂತಕುಮಾರರ ನಿಧನದ ನಂತರವೂ ಅವುಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ●


ಅನಂತಯಾನ

ಶ್ರೀ ಅನಂತಕುಮಾರರ ಜೀವನ ಕಥನ

ನಿರೂಪಣೆ : ಟಿ.ಎಸ್. ಗೋಪಾಲ್

(ಅಧ್ಯಾಯ -1)

# ಹೆಗ್ಗನಹಳ್ಳಿಯಿಂದ ಮೈಸೂರಿಗೆ



ಕಾಶಿಕ ಗೋತ್ರದ, ಮುಲಕನಾಡು ಬ್ರಾಹ್ಮಣ ಮನೆತನದ ನರಸಿಂಹಶಾಸ್ತ್ರಿಗಳ ಬದುಕು, ಸಂಸಾರ ನಿರ್ವಹಣೆ ಹತ್ತೊಂಬತ್ತನೆಯ ಶತಮಾನದ ಕಾಲದ ಬಹುತೇಕ ಗ್ರಾಮೀಣ ಬ್ರಾಹ್ಮಣ ಕುಟುಂಬಗಳಂತೆಯೇ ಇದ್ದಿತು. ಹೆಗ್ಗನಹಳ್ಳಿ ಎಂಬ ಗ್ರಾಮದಲ್ಲಿದ್ದ ಒಂದಿಷ್ಟು ಹೊಲ, ಒಂದು ಸಾಧಾರಣ ಮನೆ. ಪೂಜೆ ಪುನಸ್ಕಾರಗಳನ್ನು ಅವಲಂಬಿಸಿ ಸಾಗುತ್ತಿದ್ದ ಸಾಧಾರಣ ಮಟ್ಟದ ಬದುಕು.

ಈ ಹೆಗ್ಗನಹಳ್ಳಿ ಇರುವುದು, ಈಗಿನ ಬೆಂಗಳೂರು ವಿಮಾನ ನಿಲ್ದಾಣದ ಮುಂದಕ್ಕೆ ದೇವನಹಳ್ಳಿಗೆ ಸಮೀಪದಲ್ಲಿ. ಹಳ್ಳಿಯಲ್ಲಿದ್ದ ಹತ್ತಾರು ಮನೆಗಳಲ್ಲಿ ಶಾಸ್ತ್ರಿಯವರದಲ್ಲದೆ ಅವರ ದಾಯಾದಿಗಳ ಕುಟುಂಬಗಳೂ ಸೇರಿದ್ದವು. ಅಹೋಬಲದ ಲಕ್ಷ್ಮೀ ನರಸಿಂಹ ಇವರ ಕುಲದೈವ. ನರಸಿಂಹ ಶಾಸ್ತ್ರಿಗಳ ವಂಶದ ಪೂರ್ವಿಕರು ಇನ್ನೂರು ಮುನ್ನೂರು ವರುಷಗಳ ಮುಂಚೆಯೇ ಆಂಧ್ರಪ್ರದೇಶದಿಂದ ಯಲಹಂಕದ ಕಡೆಗೆ ವಲಸೆ ಬಂದು ಹೆಗ್ಗನಹಳ್ಳಿಯಲ್ಲಿ ನೆಲೆ ಕಂಡುಕೊಂಡಿದ್ದರು.

ನರಸಿಂಹಶಾಸ್ತ್ರಿಗಳ ಐವರು ಮಕ್ಕಳಲ್ಲಿ ದೇವಮ್ಮ ಹಿರಿಯವಳು. ಆಕೆಯ ಒಡಹುಟ್ಟಿದ ನಾಲ್ವರು ಸೋದರರು ಸುಬ್ಬರಾಮ, ನಂಜುಂಡ, ಶ್ರೀನಿವಾಸ ಮತ್ತು ನರಹರಿ. ಆಗಿನ ಪದ್ಧತಿಯಂತೆ ದೇವಮ್ಮನಿಗೆ ಚಿಕ್ಕ ವಯಸ್ಸಿನಲ್ಲೇ ಮದುವೆಯಾಗಿತ್ತು. ಎಳೆಯ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡ ದೇವಮ್ಮ, ಗಂಡನ ಮನೆಯವರ ಕುಹಕ ಹಿಂಸೆಗಳನ್ನು ತಡೆಯಲಾರದೆ ತಾಯಿಯಿಲ್ಲದ ತವರು ಮನೆಗೆ ಹಿಂತಿರುಗಿ ಬಂದಳು. ಹೀಗೆ ದೀನಸ್ಥಿತಿಯಲ್ಲಿದ್ದ ಹಿರಿಯ ಮಗಳೇ ನರಸಿಂಹಶಾಸ್ತ್ರಿಗಳ ನಿಧನದ ನಂತರ ಕುಟುಂಬಕ್ಕೆ ಆಸರೆಯಾದಳು. ತಮ್ಮಂದಿರು ಇನ್ನೂ ಚಿಕ್ಕವರು. ಕೊನೆಯ ತಮ್ಮ ನರಹರಿಗಿನ್ನೂ ಐದೋ ಆರೋ ವರ್ಷ. ತಮ್ಮಂದಿರನ್ನು ಶಾಲೆಗೆ ಸೇರಿಸಿ ವಿದ್ಯಾಭ್ಯಾಸ ಮಾಡಿಸುವುದಲ್ಲದೆ, ಹೊಲ, ಮನೆಗಳ ನಿರ್ವಹಣೆಯನ್ನೂ ದೇವಮ್ಮನೇ ನಿಭಾಯಿಸತೊಡಗಿದಳು. ತಮ್ಮಂದಿರೆಲ್ಲ ಅವಳನ್ನು ಪ್ರೀತಿಯಿಂದ ಅಮ್ಮಕ್ಕ ಎಂದೇ ಕರೆಯುತ್ತಿದ್ದರು.

ಶಾಸ್ತ್ರಿ ಕುಟುಂಬದ ಬವಣೆ ಇಲ್ಲಿಗೆ ಮುಗಿಯಲಿಲ್ಲ. ಯಜಮಾನರಿಲ್ಲದ ಕುಟುಂಬಕ್ಕೆ ಆಸರೆಯಾಗಿ ಬಾಲವಿಧವೆಯೊಬ್ಬಳು ನಿಂತದ್ದು ದಾಯಾದಿಗಳ ಮತ್ಸರವನ್ನು ಹೆಚ್ಚಿಸಿತು. ನರಸಿಂಹಶಾಸ್ತ್ರಿಗಳ ಮನೆಮಕ್ಕಳನ್ನು ಧೃತಿಗೆಡಿಸಲು ಬೇಕಾದ ಕುತಂತ್ರಗಳೆಲ್ಲ ಪ್ರಾರಂಭವಾದವು. ಫಸಲು ಬೆಳೆದ ಹೊಲಕ್ಕೆ ಬೆಂಕಿಯಿಡುವವರೆಗೂ ಇದು ಮುಂದುವರಿಯಿತು. ದಾಯಾದಿಗಳ ದುಷ್ಟತನದೆದುರು ಕೈಚೆಲ್ಲಿದ ಅಮ್ಮಕ್ಕ ಹೆಗ್ಗನಹಳ್ಳಿಯ ಮನೆಯನ್ನು ತೊರೆಯಲು ನಿರ್ಧರಿಸಿ, ತನ್ನ ತಮ್ಮಂದಿರನ್ನು ಕರೆದುಕೊಂಡು ಮೈಸೂರಿಗೆ ಹೊರಟು ಬಿಟ್ಟಳು.

ಪರಸ್ಥಳದಲ್ಲಿ ಇವರು ಅನುಭವಿಸಿದ ಕಷ್ಟವೇನೇ ಇರಲಿ, ತನ್ನ ತಮ್ಮಂದಿರನ್ನು ಅಷ್ಟಿಷ್ಟು ಓದಿಸಿ ನೆಲೆಗೊಳಿಸಬೇಕೆಂಬ ಅಮ್ಮಕ್ಕನ ಉದ್ದೇಶವಂತೂ ತಕ್ಕಮಟ್ಟಿಗೆ ಈಡೇರಿತು. ಸೋದರರಾದ ನಂಜುಂಡಶಾಸ್ತ್ರಿ ಮೈಸೂರಿನಲ್ಲಿ ಸತ್ಯನಾರಾಯಣ ಸ್ವಾಮಿ ದೇವಸ್ಥಾನ, ಗಣೇಶನ ದೇವಸ್ಥಾನಗಳಲ್ಲಿ ಪೂಜೆ ಮಾಡುವುದರ ಜೊತೆಗೆ ಪೌರೋಹಿತ್ಯ ಕಲಿತು ಜೀವನ ನಿರ್ವಹಣೆಯ ಮಾರ್ಗ ಕಂಡುಕೊಂಡರು. ಸುಬ್ಬರಾಮ ಶಾಸ್ತ್ರಿಯವರಿಗೆ ಶಾಲೆಯ ಅಧ್ಯಾಪಕನ ಕೆಲಸ ಸಿಕ್ಕಿತು. ನರಸಿಂಹಶಾಸ್ತ್ರಿಗಳ ಗಂಡುಮಕ್ಕಳಲ್ಲಿ ಮೂರನೆಯವರು ಶ್ರೀನಿವಾಸ ಶಾಸ್ತ್ರಿ. ಈತ ಪೊಲೀಸ್ ಇಲಾಖೆಗೆ ಸೇರಿ ಕಾನ್‌ಸ್ಟೇಬಲ್ ಹುದ್ದೆ ಪಡೆದರು. ಮುಂದೆಲ್ಲ ಅವರನ್ನು ಎಲ್ಲರೂ ಪ್ರೀತಿಯಿಂದ ಠಾಣಪ್ಪ ಅಂತ ಕರೆಯುತ್ತ ಇದ್ದರು. ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದುದಕ್ಕೆ ಅವರ ಹೆಸರೇ ಠಾಣಪ್ಪ ಎಂದಾಯಿತು.

ಕುಟುಂಬದಲ್ಲಿ ಎಲ್ಲರಿಗಿಂತ ಚಿಕ್ಕವರು ನರಹರಿಶಾಸ್ತ್ರಿಗಳು. ಚೆಂದದ ಹೊಂಬಣ್ಣದ ಆಕರ್ಷಕ ಸ್ವರೂಪವಿದ್ದ ನರಹರಿ ಶಾಸ್ತ್ರಿ ಓದಿನಲ್ಲಿ ತುಂಬ ಜಾಣ. ಶಾಲೆಯಲ್ಲಿ ಓದುವಾಗ ನಾಟಕಗಳಲ್ಲಿ ಹುಡುಗಿಯ ಪಾತ್ರಕ್ಕೆ ಅವರನ್ನೇ ಆಯ್ಕೆ ಮಾಡುತ್ತಿದ್ದರಂತೆ.

ನರಹರಿಶಾಸ್ತ್ರಿ ತಮ್ಮ ೧೬ನೇ ವಯಸ್ಸಿಗೆ ಎಸ್.ಎಸ್.ಎಲ್.ಸಿ. ಮುಗಿಸಿ ಕೆಲಸಕ್ಕೆ ಸೇರುವುದಕ್ಕಾಗಿ ರೈಲ್ವೇ ಇಲಾಖೆಗೆ ಅರ್ಜಿ ಹಾಕಿಕೊಂಡರು. ಸಂದರ್ಶನವನ್ನು ನಡೆಸುತ್ತಿದ್ದವನು ಒಬ್ಬ ಬ್ರಿಟಿಷ್ ಅಧಿಕಾರಿ. ಆತನಿಗೆ ಈ ಚಿಕ್ಕವಯಸ್ಸಿನ ಹುಡುಗನನ್ನು ಕಂಡು ಅಚ್ಚರಿಯೇ ಆಯಿತು. "ಯಾಕೆ ನೀನು ಇಷ್ಟು ಬೇಗ ಕೆಲಸಕ್ಕೆ ಸೇರುತ್ತಿದ್ದೀಯಾ?" ಎಂದು ಕೇಳಿದರು. ಮನೆಯಲ್ಲಿ ಎರಡು ಹೊತ್ತಿನ ಊಟಕ್ಕೂ ಬಹಳ ಕಷ್ಟ ಇದೆ. ಉದ್ಯೋಗ ಮಾಡಲೇ ಬೇಕಾದ ಅನಿವಾರ್ಯತೆಯಿದೆ ಎಂದು ನರಹರಿಶಾಸ್ತ್ರಿ ವಿವರಿಸಿದ್ದು ಆ ಬ್ರಿಟಿಷ್ ಅಧಿಕಾರಿಯ ಮನಸ್ಸಿಗೆ ತಟ್ಟಿತೋ ಇಲ್ಲವೋ, ಹುಡುಗನ ಎತ್ತರದ ನಿಲುವು, ಆಕರ್ಷಕ ಸ್ವರೂಪ ಆತನ ಮನಸೆಳೆಯಿತೆಂದರೂ ಸರಿಯೇ. ಅಂತೂ ನರಹರಿಶಾಸ್ತ್ರಿಗೆ ಉದ್ಯೋಗ ಪ್ರಾಪ್ತಿಯಾಯಿತು.

ರೈಲ್ವೆ ಇಲಾಖೆಯ ಉದ್ಯೋಗದಿಂದಷ್ಟೇ ನರಹರಿ ಶಾಸ್ತ್ರಿ ತೃಪ್ತರಾಗಲಿಲ್ಲ. ಗ್ರಂಥಾಧ್ಯಯನ, ಕಲಿಕೆಯ ಆಸಕ್ತಿಗಳು ಅವರ ಜ್ಞಾನಾರ್ಜನೆಯ ಮಾರ್ಗವನ್ನು ವಿಸ್ತರಿಸಿದವು. ಮನುವನದ ಸಮೀಪವಿದ್ದ ಗೆಳೆಯ ವಿಠಲಶಾಸ್ತ್ರಿಯ ಜೊತೆಗೂಡಿ ವೇದಾಧ್ಯಯನ ಮಾಡತೊಡಗಿದರು. ಜೊತೆಗೆ ಜ್ಯೋತಿರ್ವಿಜ್ಞಾನ, ಜ್ಯೋತಿಷ ಶಾಸ್ತ್ರಗಳನ್ನೆಲ್ಲ ಸ್ವಯಂ ಅಧ್ಯಯನ ಮಾಡ ತೊಡಗಿ ಆ ವಿಷಯಗಳಲ್ಲಿ ಸಾಕಷ್ಟು ಪರಿಣತಿಯನ್ನು ಪಡೆದರು.

ನರಹರಿ ಶಾಸ್ತ್ರಿಗಳು ಸಂಸ್ಕೃತ ಪಾಠಶಾಲೆಗೂ ಹೋಗುತ್ತಿದ್ದರು. ಮನೆಯಲ್ಲಿ ಮಕ್ಕಳಿಗೆ ಶಂಕರಾಚಾರ್ಯರ ಸ್ತೋತ್ರಗಳನ್ನು ಹೇಳಿಕೊಟ್ಟು ಕಂಠಪಾಠ ಮಾಡಿಸುತ್ತಿದ್ದರು. ನರಹರಿ ಶಾಸ್ತ್ರಿ ವೇದಾಧ್ಯಯನ ಮಾಡಲು ಪ್ರೇರಕರಾದ ಶ್ರೀ ವಿಠಲ ಶಾಸ್ತ್ರಿಗಳೇ ನರಹರಿಶಾಸ್ತ್ರಿಗಳಿಗೆ ಜೋತಿಷ್ಯ ಶಾಸ್ತ್ರದಲ್ಲಿ ಆಸಕ್ತಿ ಮೂಡಿಸಲೂ ನೆರವಾದರು. ತಾವು ವಿಠಲಶಾಸ್ತ್ರಿಗಳಿಂದ ಕಲಿತ ವಿಷಯಗಳಲ್ಲದೆ ಸ್ವಂತ ಅಧ್ಯಯನದಿಂದಲೂ ಶಾಸ್ತ್ರಿಗಳು ಸಾಕಷ್ಟು ಜ್ಞಾನಾರ್ಜನೆ ಮಾಡಿದರು. ಜಾತಕ ಚಿಂತಾಮಣಿ ಎಂಬ ಗ್ರಂಥವನ್ನು ಇರಿಸಿಕೊಂಡು ಸಾಕಷ್ಟು ಅಧ್ಯಯನ ಮಾಡಿದರು. ಜೋತಿಷ್ಯ ಶಾಸ್ತ್ರವನ್ನು ಕುರಿತ ನಿಯತಕಾಲಿಕ ಪತ್ರಿಕೆಗಳಿಂದಲೂ ನಿರಂತರವಾಗಿ ಪ್ರಯೋಜನ ಪಡೆದುಕೊಂಡರು. ಅರವತ್ತು ವರುಷಗಳ ಪಂಚಾಂಗಗಳನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದರು.

ಪುಟ 6 ರಲ್ಲಿ ಮುಂದುವರೆದಿದೆ

# ಈ ಹೊತ್ತು... ಪ್ಲಾಸ್ಟಿಕ್ ನಿಷೇಧಕ್ಕೆ ಒತ್ತು

ಮಧುಮತಿ ಕುಂಬಳೂರ್




ಪ್ಲಾಸ್ಟಿಕ್ ಬಿಟ್ಟು ಬದುಕಲಾರೆವೇನೋ ಎಂಬಷ್ಟು ಅದರ ಮೇಲೆ ಅವಲಂಬಿತರು ನಾವು. ಅದು ಅಷ್ಟರ ಮಟ್ಟಿಗೆ ನಮ್ಮ ಬದುಕನ್ನು ವ್ಯಾಪಿಸಿದೆ. ಆದರೆ ಪ್ರಯೋಜನಕ್ಕಿಂತ ಹೆಚ್ಚಾಗಿ ಅಪಾಯವನ್ನು ತಂದೊಡ್ಡಿದ ಒಂದು ಅವಿಷ್ಕಾರವಿದ್ದರೆ ಅದು ಪ್ಲಾಸ್ಟಿಕ್. ಹೀಗಾಗಿಯೇ ಅದಕ್ಕೀಗ ನಿಯಂತ್ರಣ ಹೇರುವ ಹೊತ್ತು ಬಂದಿದೆ. ವರದಂತೆ ಪ್ರವೇಶಿಸಿದ ಪ್ಲಾಸ್ಟಿಕ್ ಇದೀಗ ಶಾಪವಾದದ್ದು ಹೇಗೆ? ಪ್ಲಾಸ್ಟಿಕ್ ಎಂಬ ಸರ್ವಾಂತರ್ಯಾಮಿಯ ಹಿಂದು ಮುಂದುಗಳನ್ನು ಪರಿಶೀಲಿಸುವ ಸಮಯ ಬಂದಿದೆ.


ಮಾನವನ ಆರ್ಥಿಕ ಪ್ರಗತಿಯ ಜೊತೆಜೊತೆಗೆ ಬೆಳೆದು ಬಂದು ಅವನತಿಗೂ ಕಾರಣವಾಗುತ್ತಿರುವ ವಸ್ತು ಪ್ಲಾಸ್ಟಿಕ್. ಇಂದು ನಾವು ನೋಡುವ ಬಹಳಷ್ಟು ವಸ್ತುಗಳು ಒಂದು ಬಾರಿ ಬಳಸಿ ಎಸೆಯಲಾಗುವ ಪ್ಲಾಸ್ಟಿಕ್‌ನಿಂದ ತಯಾರಾಗಿವೆ. ಅಧ್ಯಯನಗಳ ಪ್ರಕಾರ ಜಗತ್ತಿನಲ್ಲಿ ಉತ್ಪಾದನೆಯಾಗುವ 367 ಮಿಲಿಯನ್ ಮೆಟ್ರಿಕ್ ಟನ್ ಪ್ಲಾಸ್ಟಿಕ್‌ನಲ್ಲಿ ಶೇಕಡ 9 ಮಾತ್ರ ಮರು ಬಳಕೆಗೆ ಯೋಗ್ಯವಾಗಿದೆ. ಇನ್ನುಳಿದ ಪ್ಲಾಸ್ಟಿಕ್ ತ್ಯಾಜ್ಯವಾಗಿ ಪರಿಸರದಲ್ಲಿಯೇ ಉಳಿದು ಹೋಗುತ್ತಿದೆ. ಪ್ಲಾಸ್ಟಿಕ್ ಬಳಕೆ ಹಾಗೂ ತ್ಯಾಜ್ಯ ನಿರ್ವಹಣೆ ಇದೇ ರೀತಿ ಮುಂದುವರೆದರೆ, 2050ರ ವೇಳೆಗೆ ಪರಿಸರದಲ್ಲಿ ಹಾಗೂ ಭೂ ಪ್ರದೇಶದ ಮೇಲ್ಮೈಯಲ್ಲಿ ಸುಮಾರು 12 ಬಿಲಿಯನ್ ಟನ್‌ಗಳಷ್ಟು ಪ್ಲಾಸ್ಟಿಕ್ ತ್ಯಾಜ್ಯವಿರುತ್ತದೆ ಎಂದು ಅಂದಾಜಿಸಲಾಗಿದೆ. ಈ ಪ್ಲಾಸ್ಟಿಕ್ ತ್ಯಾಜ್ಯವು ಕೊಳೆಯುವುದಿಲ್ಲ. ಬದಲಾಗಿ ಅದು ಮೈಕ್ರೋಪ್ಲಾಸ್ಟಿಕ್ ಎಂದು ಕರೆಯಲ್ಪಡುವ ಅತಿ ಸಣ್ಣ ಚೂರುಗಳಾಗಿ ಪರಿಸರದಲ್ಲಿ ಉಳಿದು ಬಿಡುತ್ತದೆ.

**'ಪೇಪರ್' ಕಪ್ ಗಳು = ಪ್ಲಾಸ್ಟಿಕ್ ಕಪ್ ಗಳು**

ಎಲ್ಲ ಪೇಪರ್ ಕಪ್ ಗಳಲ್ಲಿ ಪಾಲಿಥೀನ್ ನ ತೆಳು ಪದರವಿರುತ್ತದೆ.


ಬಿಸಿ ಚಹಾ/ಕಾಫಿಯನ್ನು ಪೇಪರ್ ಕಪ್ ಗಳಿಗೆ ಹಾಕಿದಾಗ, ಮೈಕ್ರೊ ಪ್ಲಾಸ್ಟಿಕ್ ಆ ದ್ರಾವಣದ ಜೊತೆ ಬೆರೆತು ನಿಮ್ಮ ಹೊಟ್ಟೆ ಮತ್ತು ದೇಹವನ್ನು ಸೇರುತ್ತದೆ.

**#saynotoplastic**



ನಾವು ದಿನನಿತ್ಯ ಬಳಸುವ ಪ್ಲಾಸ್ಟಿಕ್ ಚೀಲಗಳು, ಬಾಟಲಿಗಳು, ಆಹಾರದ ಪ್ಯಾಕೇಜ್‌ಗಳು, ಮುಂತಾದ ವಸ್ತುಗಳು ಸಾವಿರಾರು ವರ್ಷಗಳಾದರೂ ಭೂಮಿಯಲ್ಲಿ ಕೊಳೆಯದೇ ಉಳಿದು ಬಿಡುತ್ತವೆ. ಇಂತಹ ಪ್ಲಾಸ್ಟಿಕ್ ತ್ಯಾಜ್ಯವು ಹಲವಾರು ರೀತಿಯ ಸಮಸ್ಯೆಗಳನ್ನು ತಂದೊಡ್ಡುತ್ತದೆ. ಅದು ನೀರು ಹರಿಯುವ ದಾರಿಯನ್ನು ಮುಚ್ಚಿ ನೈಸರ್ಗಿಕ ವಿಕೋಪಗಳಿಗೆ ಕಾರಣವಾಗಬಹುದು. ಆಹಾರ ವಸ್ತುಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ ಎಸೆಯುವುದರಿಂದ ಅದನ್ನು ತಿಂದ ಜಾನುವಾರುಗಳು ಖಾಯಿಲೆಗೀಡಾಗುತ್ತವೆ. ನೀರಿನಲ್ಲಿ ಸೇರುವ ಪ್ಲಾಸ್ಟಿಕ್ ತ್ಯಾಜ್ಯವನ್ನು ಜಲಚರಗಳು ಆಹಾರವೆಂದು ಸೇವಿಸಿ ಪ್ರಾಣ ಹಾನಿಗೊಳಗಾಗುವ ಸಾಧ್ಯತೆಯಿರುತ್ತದೆ. ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಒಂದೆಡೆ ಗುಡ್ಡೆ ಹಾಕಿ ಸುಡುವುದರಿಂದಲೂ ಸಹ ವಿಷಕಾರಿ ಅನಿಲಗಳು ಉತ್ಪತ್ತಿಯಾಗಿ ಅನಾರೋಗ್ಯಕ್ಕೆ ಕಾರಣವಾಗುತ್ತವೆ.

ಸಾಗಾಣಿಕೆ ಮತ್ತು ಬಳಕೆಯ ಸಂದರ್ಭದಲ್ಲಿ ಪ್ಲಾಸ್ಟಿಕ್ ತ್ಯಾಜ್ಯವಾಗಿ ಪರಿಸರವನ್ನು ಸೇರಿಕೊಳ್ಳುತ್ತದೆ. ಆದರೆ ಇದೇ ಪ್ಲಾಸ್ಟಿಕ್ ಮಳೆ, ಗಾಳಿ, ಬಿಸಿಲು ರಾಸಾಯನಿಕ ಪ್ರಕ್ರಿಯೆಗಳು ಮುಂತಾದವಕ್ಕೆ ತುತ್ತಾಗಿ ಮೈಕ್ರೋ ಪ್ಲಾಸ್ಟಿಕ್ ಎಂಬ ಪೆಡಂಭೂತವಾಗಿ ಪರಿಸರವನ್ನು ಆಕ್ರಮಿಸುತ್ತದೆ. ನೆಲಜಲಗಳಲ್ಲದೆ ಪ್ರಾಣಿಗಳ ಶರೀರದಲ್ಲಿಯೂ ಸೇರಿಕೊಂಡು ಅನಾಹುತವನ್ನು ಸೃಷ್ಟಿಸುವ ಈ ಮೈಕ್ರೋಪ್ಲಾಸ್ಟಿಕ್‌ಗಳ ಕುರಿತು ಎಚ್ಚೆತ್ತುಕೊಂಡು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವ ಕಾಲ ಬಂದಿದೆ.




## ಪ್ಲಾಸ್ಟಿಕ್ ನ ಪಾಶದಿಂದ ಮುಕ್ತಿ ಎಂದು...?

ಪ್ಲಾಸ್ಟಿಕ್ಕಿನಿಂದ ಇಷ್ಟೆಲ್ಲಾ ತೊಂದರೆಯಾದರೆ ಅದಕ್ಕೆ ಪರಿಹಾರವೇನು...? ಮರುಬಳಕೆ ಆಗದ ಪ್ಲಾಸ್ಟಿಕ್ ಪದಾರ್ಥಗಳ ಉತ್ಪಾದನೆ ಮೊದಲು ನಿಲ್ಲಬೇಕು, ಆದಷ್ಟು ಪ್ಲಾಸ್ಟಿಕ್ಕಿನ ಬಳಕೆಯನ್ನು ಕಡಿಮೆ ಮಾಡಿ, ಅದನ್ನು ಮರುಬಳಸಬೇಕು ಎಂದು ತಜ್ಞರು ಹೇಳುತ್ತಾರೆ. ಇಂದು ನಮ್ಮ ದೇಶದಲ್ಲಿ ಪ್ಲಾಸ್ಟಿಕ್ ಸಮಸ್ಯೆಯನ್ನು ಎದುರಿಸಲು ಹಲವಾರು ಸಂಸ್ಥೆಗಳು ಬಹು ಆಯಾಮಗಳ ಪರಿಹಾರಗಳನ್ನು ಹುಡುಕುತ್ತಿವೆ. ಈ ಸಂಸ್ಥೆಗಳ ಪ್ರಯತ್ನದಿಂದಾಗಿ ಇಂದು ಭಾರತದಲ್ಲಿ ಸುಮಾರು 15-20 ಪ್ರತಿಶತ ಪ್ಲಾಸ್ಟಿಕ್ ಕಸವು ಮರುಬಳಕೆಯಾಗುತ್ತಿದೆ.

## ಪ್ಲಾಸ್ಟಿಕ್ ಹುಟ್ಟಿದ್ದು ಹೀಗೆ..

1862ರಲ್ಲಿಯೇ ಪ್ಲಾಸ್ಟಿಕ್ ಆವಿಷ್ಕಾರವಾಗಿದ್ದರೂ, ದಿನಬಳಕೆಯ ಪ್ಲಾಸ್ಟಿಕ್ ಸಾಮಗ್ರಿ ಹುಟ್ಟಿದ್ದು ಹೀಗೆ... 1933ರಲ್ಲಿ ಇಂಗ್ಲೆಂಡಿನ ನಾರ್ಥವಿಚ್ ಎಂಬ ಊರಿನ ರಾಸಾಯನಿಕ ಕಾರ್ಖಾನೆಯೊಂದರಲ್ಲಿ ಪಾಲಿ ಇಥಲೀನ್(PE) ಎಂಬ ಬಳಕೆಗೆ ಯೋಗ್ಯವಾದ ಪ್ಲಾಸ್ಟಿಕ್ ಆವಿಷ್ಕಾರವಾಯಿತು. ಇದರ ಬಹೂಪಯೋಗಿ ಗುಣದಿಂದ ಬ್ರಿಟಿಷ್ ಪಡೆಗಳು ಎರಡನೇ ಮಹಾಯುದ್ಧದಲ್ಲಿ ಬಳಸಿದವು. ಆದರೆ ಇದನ್ನು ದಿನಬಳಕೆಯ ಸಾಮಾನುಗಳ ತಯಾರಿಕೆಯಲ್ಲೂ ಬಳಸಬಹುದೆಂದು ತೋರಿಸಿಕೊಟ್ಟಿದ್ದು ಸ್ವೀಡನ್ ಮೂಲದ ಸೆಲ್ಲೊಪ್ಲಾಸ್ ಎಂಬ ಕಂಪನಿ. 1965ರಲ್ಲಿ ಈ ಕಂಪನಿಯು ಪ್ಲಾಸ್ಟಿಕ್ ನಿಂದ ತಯಾರಾದ ಕೈಚೀಲವೊಂದನ್ನು ಪ್ರಥಮವಾಗಿ ಮಾರುಕಟ್ಟೆಗೆ ಪರಿಚಯಿಸಿತು. ಇದರ ಜನಪ್ರಿಯತೆಯನ್ನು ಗಮನಿಸಿ ಮತ್ತಷ್ಟು ಕಂಪನಿಗಳು ಹೊಸ ವಿನ್ಯಾಸಗಳನ್ನು ಮಾರುಕಟ್ಟೆಗೆ ತಂದವು. 1980ರ ದಶಕದ ಆರಂಭದಲ್ಲಿ ವಿಶ್ವಾದ್ಯಂತ ಎಲ್ಲ ರಾಷ್ಟ್ರಗಳನ್ನೂ ಆವರಿಸಿಕೊಂಡ ಪ್ಲಾಸ್ಟಿಕ್ ಚೀಲಗಳು ಆ ದಶಕದ ಕೊನೆಯಲ್ಲಿ ಎಲ್ಲೆಡೆ ಏಕಸಾಮ್ಯ ಸ್ಥಾಪಿಸಿದವು.

ಪುಟ 6 ರಲ್ಲಿ ಮುಂದುವರೆದಿದೆ

ನೆನಪಿನ ಅಂಗಳದಿಂದ

# ಆತ್ಮೀಯ ಮಾರ್ಗದರ್ಶಕ ಅನಂತಕುಮಾರ್

ವಾಸುದೇವ ಪ್ರಭು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸುರತ್ಕಲ್

ನಾನು ಉತ್ತರಕನ್ನಡ ಜಿಲ್ಲೆಯ ದಾಂಡೇಲಿಯವನು. 1981ನೇ ಇಸವಿಯಲ್ಲಿ ನನಗೆ ವಿದ್ಯಾರ್ಥಿ ಪರಿಷತ್ತಿನ ಪರಿಚಯವಾಯಿತು. 1982ರಲ್ಲಿ ನಾನು ನಗರದ ಕಾರ್ಯದರ್ಶಿಯಾಗಿ ಜವಾಬ್ದಾರಿ ವಹಿಸಿಕೊಂಡೆ. 1984ರಲ್ಲಿ ನನಗೆ ಅನಂತ ಕುಮಾರರ ಪರಿಚಯವಾಯಿತು. ಆಗ ದಾಂಡೇಲಿಯಲ್ಲಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್‌ನವರು ನಡೆಸುತ್ತಿದ್ದ ಬಾಂಗೂರ ನಗರ ಮಹಾವಿದ್ಯಾಲಯದಲ್ಲಿ ಡೊನೇಶನ್ ತೆಗೆದುಕೊಳ್ಳಲು ಪ್ರಾರಂಭಿಸಿದ ಹಿನ್ನೆಲೆಯಲ್ಲಿ ಉತ್ತರಕನ್ನಡ ಜಿಲ್ಲಾ ಕಾರ್ಯದರ್ಶಿಯಾಗಿದ್ದ ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿಯವರು ನನ್ನನ್ನು ಕರೆದು ಈ ಬಗ್ಗೆ ಪ್ರತಿಭಟನೆ ಮಾಡುವಂತೆ ನನ್ನನ್ನು ಹುರಿದುಂಬಿಸಿದರು. ಧರಣಿ, ಕ್ಯಾಂಪಸ್ ಭಾಷಣ ಇತ್ಯಾದಿಯಾಗಿ ಸುಮಾರು 15 ದಿನಗಳ ವರೆಗೆ ನಡೆದ ಪ್ರತಿಭಟನೆಯ ಕೊನೆಯ ದಿನ ನಗರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಯಿತು. ಅಂದಿನ ಮೆರವಣಿಗೆಯಲ್ಲಿ ಶ್ರೀ ಅನಂತ ಕುಮಾರರು ದಾಂಡೇಲಿಗೆ ಬಂದು ಪ್ರತಿಭಟನಾ ಭಾಷಣ ಮಾಡಿದರು. ಜೊತೆಗೆ, ನಗರದ ಪ್ರಮುಖರ ಬೈಠಕ್, ಹಿರಿಯ ನಾಯಕರ ಸಭೆ ಇತ್ಯಾದಿಗಳನ್ನು ನಡೆಸಿದರು.

ಆ ದಿನಗಳಲ್ಲಿ ಅವರು ನಮ್ಮ ಮನೆಯಲ್ಲಿಯೇ ಉಳಿದುಕೊಂಡಿದ್ದರು. ಮುಂದೆ ಆಗಾಗ 3-4 ತಿಂಗಳಿಗೊಮ್ಮೆಯಾದರೂ ದಾಂಡೇಲಿಗೆ ಬಂದು ಹೋಗುತ್ತಿದ್ದರು. ಅವರಿಗೆ ಗೌಡಸಾರಸ್ವತರು ತಯಾರಿಸುವ "ಪತ್ರಾಡೋ" (ಕೆಸುವಿನ ಎಲೆಯ ಪದಾರ್ಥ) ತುಂಬ ಇಷ್ಟವಾಗುತ್ತಿತ್ತು. ಅವರು ಹಸ್ತ ಸಾಮುದ್ರಿಕೆಯಲ್ಲಿಯೂ ಪ್ರವೀಣರು. ಈ ವಿದ್ಯೆಯನ್ನು ಅವರು ತಮ್ಮ ಹಿರಿಯರಿಂದ ಕಲಿತಿದ್ದಿರಬೇಕು. ಅವರ ತಾತ ಮೈಸೂರರಸರ ಆಸ್ಥಾನದಲ್ಲಿ ಜ್ಯೋತಿಷಿಯಾಗಿದ್ದರೆಂದು ಹೇಳುತ್ತಿದ್ದರು. ಪ್ರತಿನಿತ್ಯ ಬೆಳಿಗ್ಗೆ ಎದ್ದು ಸ್ನಾನ ಮಾಡಿ ನಂತರ 5-10 ನಿಮಿಷ ಭಗವದ್ಗೀತೆಯನ್ನು ತಪ್ಪದೇ ಓದುತ್ತಿದ್ದರು. ರಾತ್ರಿ ಮಲಗಿದ ತತ್ ಕ್ಷಣವೇ ಗೊರಕೆ ಹೊಡೆಯುತ್ತಿದ್ದರು. ನಾನು ಮಾತನಾಡುತ್ತಲೇ ಇರುತ್ತಿದ್ದೆ, ಅವರ ಗೊರಕೆ ಕೇಳಿಸಿದ ಕೂಡಲೇ ಮಾತು ನಿಲ್ಲಿಸುತ್ತಿದ್ದೆ.

ಮುಂದೆ 1984ರಲ್ಲಿ ಶ್ರೀ ವಿಶ್ವೇಶ್ವರ ಹೆಗಡೆಯವರು ಪ್ರಾಂತ ಕಾರ್ಯದರ್ಶಿಯಾಗಿ ಆಯ್ಕೆಯಾದಾಗ ನನಗೆ ಉತ್ತರ ಕನ್ನಡ ಜಿಲ್ಲೆಯ ಜವಾಬ್ದಾರಿ ವಹಿಸಿದರು. ಆಗ ಮೊದಲ ಜಿಲ್ಲಾ ಪ್ರವಾಸವನ್ನು ನಾನು ಅನಂತ ಕುಮಾರರೊಂದಿಗೆ ಪ್ರಾರಂಭಿಸಿದೆ. ಬಸ್ಸಿನ ಪ್ರಯಾಣದಲ್ಲಿ ನನಗೆ ನಿದ್ರೆ ಬರುತ್ತಿರಲಿಲ್ಲ, ಆದರೆ ಅವರು ಮಾತ್ರ ಚೆನ್ನಾಗಿಯೇ ನಿದ್ರಿಸುತ್ತಿದ್ದರು. ಪ್ರವಾಸದ ಕಾಲದಲ್ಲಿ ನನಗೆ ಅವರು ಬಹಳಷ್ಟು ವಿಷಯಗಳನ್ನು ತಿಳಿಸಿಕೊಟ್ಟರು. ಹೊಸ ವಿದ್ಯಾರ್ಥಿಗಳನ್ನು ಸಂಪರ್ಕಿಸುವುದು ಹೇಗೆ, ಕಾಲೇಜಿನ ಪ್ರಾಂಶುಪಾಲರು ಮತ್ತು ಊರಿನ ಪ್ರಮುಖರನ್ನು ಯಾವ ರೀತಿ ಮಾತನಾಡಿಸಬೇಕು, ನಾವು ಉಳಿದುಕೊಳ್ಳುವ ಕಾರ್ಯಕರ್ತರ ಕೋಣೆಗಳಲ್ಲಿ, ಮನೆಗಳಲ್ಲಿ, ಮನೆಯವರೊಂದಿಗೆ ಹೇಗೆ ವರ್ತಿಸಬೇಕು ಎಂದು ಅವರು ವಿವರಿಸಿದ ವಿಷಯಗಳೆಲ್ಲ ನನಗೆ ಹೊಸತಾಗಿದ್ದವು.

ಶ್ರೀ ಅನಂತಕುಮಾರರ ಜ್ಞಾಪಕಶಕ್ತಿ ಅಪಾರ. ಬೈಠಕ್ಕುಗಳಲ್ಲಿ ಪರಿಚಯವಾದ ವಿದ್ಯಾರ್ಥಿಗಳನ್ನು ಮುಂದಿನ ದಿನಗಳಲ್ಲಿ ಅವರ ಹೆಸರಿನಿಂದಲೇ ಕರೆಯುತ್ತಿದ್ದರು. ಒಮ್ಮೆ ಪರಿಚಯವಾದರೆ ಸಾಕು, ಅವರ ಸ್ಮೃತಿಪಟಲದಲ್ಲಿ ಖಾಯಂ ಆಗಿ ದಾಖಲಾಗುತ್ತಿತ್ತು. ಅನೇಕ ಮಹಾನ್ ವ್ಯಕ್ತಿಗಳ ಪುಸ್ತಕಗಳನ್ನು ಓದಿಕೊಂಡದ್ದರಿಂದ ಅವರಿಗೆ ಎಲ್ಲರ ವಿಚಾರಗಳೂ ತಿಳಿದಿದ್ದವು. ಜಗನ್ನಾಥ ಜೋಶಿಯವರು ತಮ್ಮ ಭಾಷಣಗಳಲ್ಲಿ ಹೇಳುತ್ತಿದ್ದ ಜೋಕುಗಳನ್ನು ಆಗಾಗ ಪ್ರಸ್ತಾಪಿಸುತ್ತ ಎಲ್ಲರನ್ನೂ ನಗೆಗಡಲಿನಲ್ಲಿ ತೇಲಿಸುತ್ತಿದ್ದರು. ಸಂದರ್ಭೋಚಿತವಾಗಿ ಅವುಗಳನ್ನು ನೆನಪಿಸಿಕೊಳ್ಳುತ್ತಿದ್ದರು. ಎಲ್ಲ ಸಾಹಿತಿಗಳ ಬಗ್ಗೆ ಅವರಿಗೆ ಅಪಾರ ಗೌರವವಿತ್ತು. ಅವರ ಸಾಹಿತ್ಯದ ವಿಷಯಗಳನ್ನೂ ಆಗಾಗ ಪ್ರಸ್ತಾಪ ಮಾಡುತ್ತಿದ್ದರು.

ನಮ್ಮ ಮನೆಯ ಹತ್ತಿರದಲ್ಲಿಯೇ ಒಂದು ಸರಕಾರಿ ಪ್ರೌಢಶಾಲೆಯಿದೆ. ಅಲ್ಲಿ ಬೆಳಿಗ್ಗೆ 6 ರಿಂದ 7ರ ವರೆಗೆ ಆರೆಸ್ಸೆಸ್ ಪ್ರಭಾತ ಶಾಖೆ ನಡೆಯುತ್ತದೆ. ಆ ಶಾಖೆಯ ಜವಾಬ್ದಾರಿಯೂ ನನ್ನದಾಗಿತ್ತು. ಶ್ರೀ ಅನಂತ ಕುಮಾರರು ನಮ್ಮ ಮನೆಯಲ್ಲಿ ಉಳಿದುಕೊಂಡಾಗ ಬೆಳಿಗ್ಗೆ ನನ್ನೊಂದಿಗೆ ಶಾಖೆಗೆ ಬರುತ್ತಿದ್ದರು. ಒಮ್ಮೆ ಶಾಖೆಯಿಂದ ಮನೆಗೆ ಮರಳುತ್ತಿದ್ದಾಗ, "ವಾಸು, ನಾನು ಮುಖ್ಯಮಂತ್ರಿಯಾದರೆ ನಿನ್ನನ್ನು ಯಾವ ಖಾತೆಯ ಮಂತ್ರಿ ಮಾಡಲಿ?" ಎಂದು ಕೇಳಿದ್ದರು. ಆಗ ನಾನು "ನನಗೆ ನಿಮ್ಮ ರಾಜಕೀಯವೂ ಬೇಡ, ಮಂತ್ರಿಗಿರಿಯೂ ಬೇಡ, ನನ್ನಷ್ಟಕ್ಕೇ ನನ್ನ ಅಂಗಡಿ ನಡೆಸಿಕೊಳ್ಳಲು ಬಿಟ್ಟರೆ ಸಾಕು" ಎಂದು ಉತ್ತರಿಸಿದ್ದೆ. ನನಗಂತೂ ಅವರು ಮುಂದೊಮ್ಮೆ ಉತ್ತಮ ರಾಜಕಾರಣಿಯಾಗುವುದರಲ್ಲಿ ಅನುಮಾನವಿದ್ದಿರಲಿಲ್ಲ. ಈ ಘಟನೆ ನಡೆದ ಎರಡೇ ವರ್ಷಗಳಲ್ಲಿ ಅನಂತ ಕುಮಾರರು ರಾಜಕೀಯ ಸೇರಿದರು, ಅಪಾರ ಸಾಧನೆಯನ್ನೂ ಮಾಡಿದರು. ನಂತರವೂ ಒಮ್ಮೆ ಅವರು ಚುನಾವಣಾ ಪ್ರಚಾರಕ್ಕಾಗಿ ದಾಂಡೇಲಿಗೆ ಅಂದಿನ ಮಂಗಳೂರು ಸಂಸದರಾಗಿದ್ದ ಶ್ರೀ ಧನಂಜಯಕುಮಾರ್ ಜೊತೆಗೆ ಆಗಮಿಸಿದ್ದರು. ಆಗಲೂ ನಮ್ಮ ಮನೆಯಲ್ಲಿಯೇ ಉಳಿದುಕೊಂಡಿದ್ದರು. ಧನಂಜಯಕುಮಾರರು ಅಂಬಿಕಾನಗರದಲ್ಲಿ ಉಳಿದುಕೊಂಡದ್ದರಿಂದ ಬೆಳಿಗ್ಗೆ ಅವರನ್ನು ಅಲ್ಲಿಗೆ ಬಿಟ್ಟು ಬಂದೆ. ನಂತರ ಅವರನ್ನು ನಾನು ನೋಡಿದ್ದು ಹುಬ್ಬಳ್ಳಿಯಲ್ಲಿ ನಡೆದ ಅವರ ಮದುವೆಯ ಸಂದರ್ಭದಲ್ಲಿ. ಅದೊಂದು ಜಾತ್ರೆ. ಅದಕ್ಕೆ ಮೊದಲೊಮ್ಮೆ ನಾನು ಅವರ ಹುಬ್ಬಳ್ಳಿಯ ಮನೆಗೆ ಹೋಗಿದ್ದೆ. ಆಗ ಅವರ ತಾಯಿ, ಶ್ರೀಮತಿ ಗಿರಿಜಾ ಶಾಸ್ತ್ರಿಯವರು ಹುಬ್ಬಳ್ಳಿಯ ಉಪ ಮೇಯರ್ ಆಗಿದ್ದರು. ನನ್ನನ್ನೂ ನನ್ನ ತಂದೆಯವರನ್ನೂ ಅವರು ತುಂಬ ಸಜ್ಜನಿಕೆಯಿಂದ ಬರಮಾಡಿಕೊಂಡು ಮಾತನಾಡಿಸಿದ್ದರು. ಆ ದಿನ ಅನಂತಕುಮಾರರೂ ಮನೆಯಲ್ಲಿದ್ದರು. ಅನಂತ ಕುಮಾರರಿಗೆ ಅವರ ತಾಯಿಯೇ ಪ್ರೇರಣಾಶಕ್ತಿ ಮತ್ತು ಮಾರ್ಗದರ್ಶಕಿಯಾಗಿದ್ದರು. ನನ್ನ ವಿದ್ಯಾರ್ಥಿ ಪರಿಷತ್ತಿನ ಕಾಲಘಟ್ಟದಲ್ಲಿ ಶ್ರೀ ಅನಂತಕುಮಾರ ಮತ್ತು ಶ್ರೀ ವಿಷ್ಣುಕಾಂತ ಚಟಪಲ್ಲಿಯವರು ರಥದ ಎರಡು ಚಕ್ರಗಳಂತಿದ್ದು ಅಭಾವಿಪವನ್ನು ಬೆಳೆಸಲು ತುಂಬ ಶ್ರಮ ವಹಿಸಿದ್ದರು.

ಅದೇ ವೇಗದಲ್ಲಿ ಶ್ರೀ ಅನಂತಕುಮಾರರು ಭಾಜಪವನ್ನು ಸೇರಿದ ಕೂಡಲೇ ಪಕ್ಷವನ್ನೂ ರಾಜ್ಯದಲ್ಲಿ ವಿಸ್ತರಿಸಿದರು. ಒಟ್ಟಾರೆ ನನ್ನ ವಿದ್ಯಾರ್ಥಿ ಪರಿಷತ್ತಿನ 3-4 ವರ್ಷಗಳಲ್ಲಿ ನಾನು ಅವರಿಂದ, ಮಾನ್ಯ ದತ್ತಾಜೀ, ಮದನದಾಸಜೀ, ಶ್ರೀ ಗೋವಿಂದಾಚಾರ್ಯಜೀ, ಶ್ರೀ ಪಿ ವಿ ಕೃಷ್ಣ ಭಟ್ಟರು ಮುಂತಾದ ಮಹನೀಯರಿಂದ ಅನೇಕ ಸಂಗತಿಗಳನ್ನು ಕಲಿತಿದ್ದೇನೆ. ನನ್ನ ಜೀವನವನ್ನು ರೂಪಿಸುವಲ್ಲಿ ಈ ಎಲ್ಲ ಮಹನೀಯರೂ, ಇತರ ಅನೇಕ ಕಾರ್ಯಕರ್ತರೂ ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಅವರಿಗೆಲ್ಲ ನಾನು ಚಿರಋಣಿಯಾಗಿರುತ್ತೇನೆ.

ಈ ಮಧ್ಯೆ ಶ್ರೀ ಅನಂತಕುಮಾರರ ಮಾರ್ಗದರ್ಶನದಲ್ಲಿ ದಾಂಡೇಲಿಯಲ್ಲಿ ಒಂದು ಪ್ರಾಂತ ಕಾರ್ಯಕಾರಿಣಿ, ಶಿರ್ಸಿಯಲ್ಲಿ ಜಿಲ್ಲಾ ಸಮ್ಮೇಳನ ಮತ್ತು ವಿವಿಧ ಕಡೆಗಳಲ್ಲಿ ಅಭ್ಯಾಸ ವರ್ಗಗಳು ನಡೆದಿವೆ. ಆ ಎಲ್ಲ ಸಂದರ್ಭಗಳಲ್ಲಿ ನನಗೆ ಉತ್ತಮ ಮಾರ್ಗದರ್ಶನ ಲಭಿಸಿದೆ. ವಿವಿಧ ಕಡೆಗಳಲ್ಲಿ ನಡೆದ ಪ್ರಾಂತ ಕಾರ್ಯಕಾರಿಣಿ ಮತ್ತು ಪ್ರಾಂತ ಅಭ್ಯಾಸ ವರ್ಗಗಳಲ್ಲಿ ನನಗೆ ವಿವಿಧ ಜವಾಬ್ದಾರಿಗಳನ್ನು ನೀಡಿ ನನ್ನಲ್ಲಿಯೂ ನಾಯಕತ್ವದ ಗುಣಗಳನ್ನು ಬೆಳೆಸಲು ಮುತುವರ್ಜಿ ವಹಿಸಿದ ಅವರನ್ನು ನಾನು ಎಂದಿಗೂ ಮರೆಯಲಾರೆ. ಇಂದಿಗೂ ಅವರ ಮಾರ್ಗದರ್ಶನವನ್ನು ನೆನೆಸಿಕೊಂಡೇ ನಾನು ಕಾರ್ಯಕ್ರಮಗಳನ್ನು ಆಯೋಜಿಸುತ್ತೇನೆ.

ಅನಂತಕುಮಾರರು ನನಗೆ ಪರಿಚಯವಾದ ದಿನದಿಂದ ಗೆಳೆಯನಾಗಿ, ಅಣ್ಣನಾಗಿ, ಮಾರ್ಗದರ್ಶಕನಾಗಿ, ಮನೆಯವರಲ್ಲಿ ಒಬ್ಬರಾಗಿ ಇದ್ದವರು. ಅನಂತಕುಮಾರರನ್ನು ದೂರದರ್ಶನದಲ್ಲಿ ಅಡ್ವಾನಿ, ವಾಜಪೇಯಿಯವರ ಜೊತೆ ನೋಡಿದಾಗ ನಮ್ಮ ತಾಯಿಯವರು ಹೆಮ್ಮೆಯಿಂದ ಬೀಗುತ್ತಿದ್ದರು.

ಶ್ರೀ ಅನಂತಕುಮಾರರ ಇರುವಿಕೆಯಲ್ಲಿಯೇ ಆಗಬೇಕಿದ್ದ ABVP Past Members Group ಅವರ ಅಗಲಿಕೆಯ ನಂತರ ಪ್ರಾರಂಭವಾಗಿದೆ. ಈಗಲೂ ಅವರ ಆತ್ಮವೇ ಸಂಘಟನೆಯ ಕಾರ್ಯ ಮಾಡುತ್ತಿದೆಯೆಂಬ ಭಾಸವಾಗುತ್ತಿದೆ. ಅನಂತಕುಮಾರರ ಅನುಪಸ್ಥಿತಿಯು ಅವರ ಸಂಗಾತಿಗಳನ್ನು ನಿರಂತರವಾಗಿ ಕಾಡುತ್ತದೆ. ●

**ಪ್ಲೇಟ್ ಬ್ಯಾಂಕ್ ಯೋಜನೆಯ ನೆರವು ಪಡೆಯಲು ಸಂಪರ್ಕಿಸಿ:**

ಬೆಂಗಳೂರು: ಅನ್ನಪೂರ್ಣ, ಬಿಬಿಎಂಪಿ ಸಮುದಾಯ ಭವನ, ಕೆಂಪೇಗೌಡ ನಗರ, ಬೆಂಗಳೂರು 560019 ದೂರವಾಣಿ : 080-26620404

ಹುಬ್ಬಳ್ಳಿ: 'ಗುರುಪ್ರಭ' '' ಕೆಂಪಣ್ಣನವರ ಕಲ್ಯಾಣ ಮಂಟಪದ ಸಮೀಪ, ವಿಜಯನಗರ, ಹುಬ್ಬಳ್ಳಿ-580032 ದೂರವಾಣಿ: 9845658879

ಕಲಬುರ್ಗಿ: ಅನ್ನಪೂರ್ಣ, ಮಹಾನಗರ ಪಾಲಿಕೆ ಕಟ್ಟಡ, ಸಂತೋಷ ಕಾಲನಿ, ಉದನೂರು ರಸ್ತೆ ಕಲಬುರ್ಗಿ, ದೂರವಾಣಿ: 9448359355/7353638000

ಗದಗ: ಸನ್ ರೈಸ್ ಪ್ರೀ ಸ್ಕೂಲ್, ರೈಲ್ವೆ ಪೋಲೀಸ್ ಕ್ವಾರ್ಟರ್ಸ್ ಸಮೀಪ, ಮಾಸರಿ , ಗದಗ -582101 ದೂರವಾಣಿ : 8050692131

ಪುಟ 3 ರಿಂದ

## ಹೆಗ್ಗನಹಳ್ಳಿಯಿಂದ ಮೈಸೂರಿಗೆ

ನರಹರಿ ಶಾಸ್ತ್ರಿ ತಮ್ಮ ಆಕರ್ಷಕ ಸ್ವರೂಪ ಸ್ವಭಾವಗಳ ದೆಸೆಯಿಂದ ಎಲ್ಲರ ಗಮನ ಸೆಳೆಯುತ್ತಿದ್ದರು. ಅವರಿದ್ದಲ್ಲಿ ಗೆಳೆಯರ, ಅಭಿಮಾನಿಗಳ ಗುಂಪೇ ಸೇರುತ್ತಿದ್ದಿತು. ಶಾಸ್ತ್ರಿಗಳ ವಾಚಾಳಿತನ ಕೇವಲ ಕಾಡು ಹರಟೆಯ ಮಟ್ಟದ್ದಾಗಿರಲಿಲ್ಲ. ಆತನ ವಾಕ್ಚಾತುರ್ಯ, ಹಾಸ್ಯಪ್ರಿಯತೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದ ಗುಣಗಳು. ತಮ್ಮ ಅಸಾಧಾರಣ ಬುದ್ಧಿಶಕ್ತಿ, ಜ್ಞಾನಪಿಪಾಸೆಗಳಿಂದಾಗಿ ಶಾಸ್ತ್ರಿಗಳ ನಿಲುವು ಉಳಿದವರಿಗಿಂತ ಮೇಲ್ಮಟ್ಟದಲ್ಲಿದ್ದುದರಲ್ಲಿ ಅಚ್ಚರಿಯೇನೂ ಇಲ್ಲ.

ಶಾಸ್ತ್ರಿ ಸೋದರರು ಓದಿ, ಉದ್ಯೋಗಕ್ಕೆ ಸೇರಿ ವಿವಾಹಿತರಾದ ಮೇಲೂ ಅವರ ಕುಟುಂಬ ಅವಿಭಕ್ತವಾಗಿಯೇ ಉಳಿಯಿತು. ಸುಬ್ಬರಾಮ ಶಾಸ್ತ್ರಿಗಳು ಸುತ್ತಮುತ್ತಲ ಊರುಗಳಿಗೆ ವರ್ಗಾವಣೆಯಾಗುವ ಉಪಾಧ್ಯಾಯ ವೃತ್ತಿಯಲ್ಲಿದ್ದುದರಿಂದ ತಮ್ಮ ಕುಟುಂಬವನ್ನು ಮೈಸೂರಿನ ಮನೆಯಲ್ಲೇ ಇರಿಸಿದ್ದರು. ನಂಜುಂಡ ಶಾಸ್ತ್ರಿಗಳು ಅವಿವಾಹಿತರಾಗಿಯೇ ಉಳಿದು ಪೌರೋಹಿತ್ಯ ನಡೆಸುತ್ತ ಕಾಲಯಾಪನೆ ಮಾಡಿಕೊಂಡಿದ್ದರು. ಪೋಲಿಸ್ ಇಲಾಖೆಯಲ್ಲಿದ್ದ ಶ್ರೀನಿವಾಸ ಶಾಸ್ತ್ರಿಗಳು ಅತ್ಯಂತ ಸಾಧು ಸ್ವಭಾವದ ಜೀವಿ. ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸುವುದರಲ್ಲಿ ಆಸಕ್ತಿ ತೋರುತ್ತಿರಲಿಲ್ಲ. ಹೀಗಾಗಿ ನರಹರಿ ಶಾಸ್ತ್ರಿಗಳು ಎಲ್ಲರಿಗಿಂತ ಚಿಕ್ಕವರಾಗಿದ್ದರೂ ಮನೆಯ ಜವಾಬ್ದಾರಿಯನ್ನು ನೋಡಿಕೊಳ್ಳಬೇಕಾಗಿ ಬಂದಿತು. ಹೀಗೆ ಈ ಅವಿಭಕ್ತ ಕುಟುಂಬದ ಯಜಮಾನರಾಗಿದ್ದವರು ನರಹರಿ ಶಾಸ್ತ್ರಿಗಳೇ. ●



ಚಿತ್ರದಲ್ಲಿ ಎಡದಿಂದ(ಮಧ್ಯದ ಸಾಲು) ನಾಲ್ಕನೆಯವರು ಶ್ರೀ ನರಹರಿ ಶಾಸ್ತ್ರಿ , ಮೊದಲನೆಯವರು ಶ್ರೀ ನಾರಾಯಣ ಶಾಸ್ತ್ರಿ, ಎರಡನೆಯವರು ಶ್ರೀಮತಿ ಗಿರಿಜಾ ಶಾಸ್ತ್ರಿ, ಅವರ ಮಡಿಲಲ್ಲಿ ಮಗು ಅನಂತಕುಮಾರ್ ಅವರನ್ನು ಕಾಣಬಹುದು.

ಪುಟ 1 ರಿಂದ

## ವಿದ್ಯಾರ್ಥಿ ಹೋರಾಟಗಳ ಮುಂಚೂಣಿಯಲ್ಲಿ ಅನಂತಕುಮಾರ್

ಇನ್ನು ಮುಂದಿನ ಹತ್ತು ವರುಷಗಳಲ್ಲಿ ವಿದ್ಯಾರ್ಥಿ ಸಂಘಟನೆಯನ್ನು ಬಲಪಡಿಸುವ ಕೆಲಸದಲ್ಲಿ ನಾವು ತೊಡಗಬೇಕು. ಬಲಪಡಿಸುವುದು ಎಂದರೆ ಕರ್ನಾಟಕ ಸರ್ಕಾರವು ತಾನು ತೆಗೆದುಕೊಳ್ಳಬೇಕಾಗಿರುವ ನಿರ್ಣಯಗಳನ್ನು ವಿದ್ಯಾರ್ಥಿ ಪರಿಷತ್ತಿನ ಜೊತೆಗೆ ಚರ್ಚಿಸಿಯೇ ತೀರ್ಮಾನಿಸಬೇಕಾದ ಅನಿವಾರ್ಯತೆ ಉಂಟಾಗುವ ಹಾಗೆ ನಾವು ಪರಿಷತ್ತನ್ನು ಬಲಪಡಿಸುವ, ನಿರ್ಣಾಯಕ ಹಂತಕ್ಕೆ ಒಯ್ಯುವ ಕೆಲಸದಲ್ಲಿ ಈ ಪ್ರಾಂತ್ಯ ಅಧಿವೇಶನದ ಮೂಲಕ ನಾವು ತೊಡಗಿಸಿಕೊಳ್ಳಬೇಕಾಗಿದೆ" ಎಂದು ಹೇಳಿದ ಮಾತುಗಳು ಎಲ್ಲರಲ್ಲೂ ನವಚೈತನ್ಯವನ್ನು ತುಂಬಿಸಿತು. ಅಂದು ಬೈಠಕ್ಕಿನಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರಾಂತ್ಯ ಅಧಿವೇಶನದಲ್ಲಿ ತಪ್ಪದೇ ಭಾಗವಹಿಸಿದ್ದು ಇದಕ್ಕೆ ಸಾಕ್ಷಿ.

ಯಾವನೇ ವ್ಯಕ್ತಿ ಪರಿಪೂರ್ಣನಲ್ಲ. ಆದರೆ ಅಂತಹ ಅನೇಕ ವ್ಯಕ್ತಿಗಳಿಂದ ರಾಷ್ಟ್ರ ನಿರ್ಮಾಣ ಸಾಧ್ಯ. ವಿದ್ಯಾರ್ಥಿ ಪರಿಷತ್ತಿನ ಅಭ್ಯಾಸವರ್ಗಗಳಲ್ಲಿ ಈ ಸೈದ್ಧಾಂತಿಕ ಭೂಮಿಕೆಯನ್ನು ಅನಂತಕುಮಾರ್ ಅಳವಡಿಸಿಕೊಂಡರು. ವೈಚಾರಿಕ ಬದ್ಧತೆ, ಸ್ಪಷ್ಟತೆಗಳ ಜೊತೆಗೆ ಒಂದು ಕಾರ್ಯಪದ್ಧತಿಯ ತರಬೇತಿಯೂ ಅವರಿಗೆ ಲಭ್ಯವಾಯಿತು. ಅವರನ್ನು ಒಳಗೊಂಡ ತಂಡ ರಚನೆಯಾದದ್ದಲ್ಲ, ಉಗಮವಾದದ್ದು. ಆ ತಂಡದಲ್ಲಿ ಒಬ್ಬರಾಗಿ ಅನಂತಕುಮಾರ್ ಬೆಳೆದರು. ಹಾಗೆ ಕಾರ್ಯಕರ್ತರ ನಡುವೆ ಬೆಳೆಯುತ್ತಲೇ ತಮ್ಮ ವ್ಯಕ್ತಿತ್ವವನ್ನೂ ಪರಿಶ್ರಮದಿಂದಲೇ ಬೆಳೆಸಿಕೊಂಡರು.

ವಿವಿಧ ಪ್ರಾಂತ್ಯಗಳ ಎಲ್ಲ ಕಾರ್ಯಕರ್ತರ ಜೊತೆಗೆ ಬೆಳೆಯುವ ತಂಡ ಮನೋಭಾವ ಮತ್ತು ವಿಚಾರ ಸ್ಪಷ್ಟತೆಗಳ ಜೊತೆಗೆ ಅನಂತಕುಮಾರ್ ತಾವು ಭಾಗವಹಿಸಿದ ಹೋರಾಟಗಳ ಮೂಲಕ ನೇತೃತ್ವಗುಣವನ್ನೂ ಸಂಘಟನಾ ಕೌಶಲವನ್ನೂ ಬೆಳೆಸಿಕೊಳ್ಳುವುದು ಸಾಧ್ಯವಾಯಿತು. ಅವರು ವಿದ್ಯಾರ್ಥಿ ಪರಿಷತ್ತಿನಲ್ಲಿ ತಮ್ಮ ಹತ್ತು ವರುಷಗಳ ಕಾರ್ಯಾನುಭವವನ್ನು ಮುಂದಿನ ಮೂವತ್ತು ವರುಷಗಳ ಸಾಮಾಜಿಕ ಮತ್ತು ರಾಜಕೀಯ ಜೀವನಗಳಲ್ಲಿ ಅನ್ವಯಿಸಿ ಯಶಸ್ಸು ಪಡೆದರು.

"ಪಥ್ ಕಾ ಅಂತಿಮ್ ಲಕ್ಷ್ ನಹೀಂ ಹೈ , ಸಿಂಹಾಸನ್ ಚಢ್ ತೇ ಜಾನಾ
ಸಬ್ ಸಮಾಜ್ ಕೋ ಲಿಯೇ ಸಾಥ್ ಮೇ ಆಗೇ ಹೀ ಬಢ್ ತೇ ಜಾನಾ"


ಎಂಬ ಒಂದು ಪದ್ಯದ ಸಾಲುಗಳು ಅನಂತಕುಮಾರರ ಜೀವನಕ್ಕೆ ಸಮರ್ಪಕವಾಗಿ ಹೊಂದುತ್ತವೆ ಎನ್ನಿಸುತ್ತದೆ. ●

ಪುಟ 4 ರಿಂದ

## ಈ ಹೊತ್ತು... ಪ್ಲಾಸ್ಟಿಕ್ ನಿಷೇಧಕ್ಕೆ ಒತ್ತು

**ಪ್ಲಾಸ್ಟಿಕ್ ಮುಕ್ತಿ ಅಭಿಯಾನಕ್ಕೆ ಅದಮ್ಯ ಚೇತನದ ಕೊಡುಗೆ**

ಪರಿಸರ ರಕ್ಷಣೆ ನಮ್ಮ ಮಂತ್ರ ಎಂದು ಕೆಲಸ ನಿರ್ವಹಿಸುತ್ತಿರುವ ಅದಮ್ಯ ಚೇತನ ಸಂಸ್ಥೆ ಹಲವು ಕಾರ್ಯಕ್ರಮ ನಡೆಸುತ್ತಿದೆ. ಅನ್ನ-ಅಕ್ಷರ-ಆರೋಗ್ಯ-ಪ್ರಕೃತಿ ಮತ್ತು ಸಂಸ್ಕೃತಿ ಎಂಬ ಧ್ಯೇಯಗಳನ್ನಿಟ್ಟುಕೊಂಡು ಸೇವಾ ನಿರತವಾಗಿರುವ ಅದಮ್ಯ ಚೇತನ ಪ್ಲಾಸ್ಟಿಕ್ ಮುಕ್ತ ಪರಿಸರದ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅವುಗಳಲ್ಲಿ ಪ್ಲೇಟ್ ಬ್ಯಾಂಕ್ ಒಂದು ಮಹತ್ವದ ಯೋಜನೆ. ಪ್ಲಾಸ್ಟಿಕ್ ತಟ್ಟೆ, ಚಮಚ, ಲೋಟ, ಬಾಟಲ್‌ಗಳ ಸಂಪೂರ್ಣವಾಗಿ ನಿಲ್ಲಿಸುವ ನಿಟ್ಟಿನಲ್ಲಿ ಇದೊಂದು ವಿನೂತನ ಹೆಜ್ಜೆ. ಪಾಲಿಯೆಸ್ಟರ್ ಎಂಬ ಪ್ಲಾಸ್ಟಿಕ್ ರೂಪಾಂತರದ ಹಾವಳಿಯನ್ನು ತಗ್ಗಿಸಲು ಹಳೆಯ ಸೀರೆಗಳಿಂದ ಕೈಚೀಲಗಳನ್ನು ತಯಾರಿಸಿ ಉಚಿತವಾಗಿ ವಿತರಿಸುವ RR ಬ್ಯಾಗ್ (Reuse recycle bag) ಯೋಜನೆ ಜಾರಿಯಲ್ಲಿದೆ. ಅನಂತ ಪ್ರೇರಣಾ ಕೇಂದ್ರದಲ್ಲಿ ಶಾಲಾ ಮಕ್ಕಳಿಗೆ ಪ್ಲಾಸ್ಟಿಕ್ ಹಾವಳಿಯ ಕುರಿತು ಕಾರ್ಯಾಗಾರವನ್ನು ನಡೆಸಲಾಗುತ್ತಿದೆ.




### ಸಂಶೋಧನೆಗಳು ಏನು ಹೇಳುತ್ತವೆ...?
### ಮಾನವ ರಕ್ತದಲ್ಲಿ ಪ್ಲಾಸ್ಟಿಕ್...

ನೆದರ್‌ಲ್ಯಾಂಡ್ ಆಂಸ್ಟರ್ಡ್ಯಾಮ್ ವಿವಿ ತಜ್ಞರಾದ ಪ್ರೊ. ಡಿಕ್ ವೆತಾಕ್ ನಡೆಸಿದ ಸಂಶೋಧನೆಯಲ್ಲಿ ಮಾನವನ ರಕ್ತದಲ್ಲಿ ಪಾಲಿಮರ್ ಅಂಶ ಕಂಡು ಬಂದಿದೆ. ಮುಂದಿನ ದಿನಗಳಲ್ಲಿ ಈ ಕುರಿತಂತೆ ಇನ್ನುಷ್ಟು ಸಂಶೋಧನೆಗಳು ನಡೆಯಬೇಕಾದ ಅನಿವಾರ್ಯತೆ ಇದೆ. ಟೀ ಬ್ಯಾಗನ್ನು ಚಹಾದಲ್ಲಿ ಡಿಪ್ ಮಾಡುವಾಗ ನೂರಾರು ಕೋಟಿ ಮೈಕ್ರೋ ಪ್ಲಾಸ್ಟಿಕ್ ಗಳು ಚಹಾದಲ್ಲಿ ಸೇರುತ್ತವೆ ಎಂದು ಕೆನಡಾ ದೇಶದ ಮಾಂಟ್ರಿಯಲ್ ನಗರದ ವಿಜ್ಞಾನಿಗಳು ನಡೆಸಿದ ಸಂಶೋಧನೆಯಿಂದ ತಿಳಿದು ಬಂದಿದ್ದು, ಬಿಸಿಯಾದ ನೀರಿನಲ್ಲಿ ಟೀ ಬ್ಯಾಗ್ ಇಳಿಸಿದಾಗ 11,160 ಕೋಟಿಗಳಷ್ಟು ಮೈಕ್ರೊಪ್ಲಾಸ್ಟಿಕ್‌ಗಳು ಹಾಗೂ 310 ಕೋಟಿ ನ್ಯಾನೋ ಮೈಕ್ರೊಪ್ಲಾಸ್ಟಿಕ್‌ಗಳು ಒಂದು ಕಪ್ಪು ಚಹಾ ಸೇರಿಕೊಳ್ಳುತ್ತವೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ. ●

ದೇಗುಲದರ್ಶನ ಮಾಲಿಕೆ - 12

# ಹಾವೇರಿ/ದಾವಣಗೆರೆ ಜಿಲ್ಲೆಗಳ ಕೆಲವು ದೇವಾಲಯಗಳು - 1




ಈ ತಿಂಗಳ ದೇಗುಲದರ್ಶನ ಕಾರ್ಯಕ್ರಮದಲ್ಲಿ ದಾವಣಗೆರೆಯ ಕೆಲವು ಪ್ರಾಚೀನ ಗುಡಿಗಳನ್ನೂ ಪಕ್ಕದ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಕೆಲವು ದೇವಾಲಯಗಳನ್ನೂ ನೋಡಿ ಬರೋಣ.

ದಾವಣಗೆರೆಯಿಂದ ರಾಣೆಬೆನ್ನೂರಿಗೆ ಹೋಗುವ ಮಾರ್ಗದಲ್ಲಿ 35 ಕಿಮೀ ದೂರದಲ್ಲಿ ಇಟಗಿ ಗ್ರಾಮವಿದೆ. ಇಲ್ಲಿ ಪೂರ್ವಕಾಲದ ಅನೇಕ ಗುಡಿಗಳಿವೆ. ಮುಖ್ಯವಾಗಿ ಶ್ರೀ ರಾಮೇಶ್ವರ, ಕಲ್ಲೇಶ್ವರ, ಮಾಲತೇಶ ದೇವಾಲಯಗಳು.

ಕಲ್ಯಾಣ ಚಾಲುಕ್ಯರ ಕಾಲದ ಈ ಗುಡಿಗಳ ಜೀರ್ಣೋದ್ಧಾರ ಮಾಡಲಾಗಿದ್ದು ನಿತ್ಯ ಪೂಜೆ ಪುನಸ್ಕಾರಗಳು ಸಲ್ಲುತ್ತಿವೆ. ರಾಮೇಶ್ವರ ಗುಡಿಯ ಒಳಮಂಟಪದ ಕಂಬಗಳು ವೈವಿಧ್ಯಮಯ. ವೀರಭದ್ರ, ಸೂರ್ಯ, ಮತ್ತಿತರ ಶಿಲ್ಪಗಳು ಆಕರ್ಷಕವಾಗಿವೆ. ವಿಜಯನಗರೋತ್ತರ ಕಾಲದ ಹನುಮಂತನ ಉಬ್ಬುಶಿಲ್ಪ ಗಮನ ಸೆಳೆಯುತ್ತದೆ.

ಇಟಗಿಯಿಂದ ಮುಂದೆ ಏಳು ಕಿಮೀ ದೂರದಲ್ಲಿ ಹೊಳೆ ಆನವೇರಿ ಎಂಬ ಗ್ರಾಮ. ಇಲ್ಲಿ ತುಂಗಭದ್ರಾ ನದಿಯ ತೀರದಲ್ಲಿರುವ ಸಂಗಮೇಶ್ವರ ದೇಗುಲ ಚಿಕ್ಕದಾದರೂ ಹೊರಗೋಡೆಯ ಮೇಲಿನ ಶಿಲ್ಪಗಳಿಂದ ಮಹತ್ವ ಪಡೆದಿದೆ. ಶಿಲಾಬಾಲಿಕೆಯರಂತೆ ಕಾಣುವ ನರ್ತಕಿಯರೂ ವಾದ್ಯಗಾರರೂ ಸಾವಿರ ವರುಷಗಳ ಹಿಂದಿನ ಶಿಲ್ಪಕಲಾ ಚಾತುರ್ಯಕ್ಕೆ ಸಾಕ್ಷಿಗಳಾಗಿದ್ದಾರೆ.

ಹಾವೇರಿ ಜಿಲ್ಲೆಗೆ ಸೇರಿದ ರಟ್ಟಿಹಳ್ಳಿಯಲ್ಲಿ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ ಕದಂಬೇಶ್ವರ ದೇವಾಲಯವಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ನವರಂಗದ ಕಂಬಗಳೂ ಗುಡಿಯ ಶಿಖರವೂ ಆಕರ್ಷಕವಾಗಿವೆ.








ಇನ್ನು ದಾವಣಗೆರೆ ಜಿಲ್ಲೆ. ಉಕ್ಕಡಗಾತ್ರಿ ಕ್ಷೇತ್ರವು ಗುರು ಅಜ್ಜಯ್ಯನ ಧಾರ್ಮಿಕ ಪೀಠ. ಐತಿಹ್ಯ, ಧಾರ್ಮಿಕ ನಂಬಿಕೆಗಳಿಂದಾಗಿ ಪ್ರಸಿದ್ಧವಾದ ಸ್ಥಳ.

ಉಕ್ಕಡಗಾತ್ರಿಯಿಂದ ಐದು ಕಿಮೀ ದೂರದ ನಂದಿಗುಡಿ ಹೆಸರೇ ಹೇಳುವಂತೆ ಬಸವೇಶ್ವರ ದೇಗುಲವಿರುವ ಕ್ಷೇತ್ರ. ಕಲ್ಯಾಣ ಚಾಲುಕ್ಯರ ಕಾಲದ ನಂದಿ, ಶೈವ ದ್ವಾರಪಾಲಕರು. ಅತ್ಯಾಕರ್ಷಕವಾದ ದ್ವಾರಬಂಧಗಳಿಂದ ನೋಡುಗರನ್ನು ಚಕಿತಗೊಳಿಸುತ್ತದೆ.

ಇಲ್ಲಿಂದ ಮುಂದೆ ಭಾನುವಳ್ಳಿಯ ಲಕ್ಷ್ಮೀನಾರಾಯಣ ದೇವಾಲಯ. ಹೊಯ್ಸಳರ ಕಾಲದ ಈ ಗುಡಿಯಲ್ಲಿರುವ ಲಕ್ಷ್ಮೀನಾರಾಯಣನ ವಿಗ್ರಹವು ಈ ಮಾದರಿಯ ಶ್ರೇಷ್ಠ ಶಿಲ್ಪಗಳಲ್ಲೊಂದೆಂಬುದರಲ್ಲಿ ಅತಿಶಯವಿಲ್ಲ. ಒಂಬತ್ತು ಅಡಿ ಎತ್ತರದ ಭವ್ಯವಾದ ವಿಗ್ರಹದ ಕೆತ್ತನೆ ಹೊಯ್ಸಳ ಶೈಲಿಯ ಸೊಗಸನ್ನು ತೋರ್ಪಡಿಸುತ್ತದೆ.

ಮುಂದೆ, ನಂದಿತಾವರೆ ಎಂಬ ಗ್ರಾಮ. ಇಲ್ಲಿರುವ ಅಮೃತಮಾಣಿಕೇಶ್ವರ ದೇವಾಲಯವೂ ಹೊಯ್ಸಳ ಕಾಲಕ್ಕೆ ಸೇರಿದುದು. ಗುಡಿಯೊಳಗೆ ಶಿವಲಿಂಗಕ್ಕೆ ನಿತ್ಯಪೂಜಾದಿಗಳು ಸಲ್ಲುತ್ತಿವೆ. ಹೊರಗೋಡೆಯ ಶಿಲ್ಪಗಳು ಕಾಲವಶದಿಂದ ಸವೆದಿವೆ.

ಕೊಮಾರನಹಳ್ಳಿಯಲ್ಲಿ ಶ್ರೀ ರಂಗನಾಥ ದೇವಾಲಯವಿದೆ. ಹೆಳವನಕಟ್ಟೆ ಜಲಾಶಯದ ಪಕ್ಕದಲ್ಲಿರುವ ಗುಡಿ. ಹೆಳವನಕಟ್ಟೆ ಗಿರಿಯಮ್ಮ ಎಂಬ ಕವಯಿತ್ರಿ ಇಲ್ಲಿಯೇ ಇದ್ದವಳು. ಗುಡಿಯೊಂದರಲ್ಲಿ ಆಕೆಯ ಪ್ರತಿಮೆಯೂ ಇದೆ. ಅಲ್ಲಿಯೇ ಗುರು ಶಂಕರ ಭಗವಾನರ ವೇದಿಕೆಯನ್ನೂ ದರ್ಶಿಸಬಹುದು. ●

**ಟಿ.ಎಸ್. ಗೋಪಾಲ್/ ಕೆಂಗೇರಿ ಚಕ್ರಪಾಣಿ**

ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ನೋಡಲು ಬೇಕಾದ ಲಿಂಕ್ ಇಲ್ಲಿದೆ:
http://YouTube.com/AnanthkumarPratishthana

ಸಸ್ಯಲೋಕ ಪರಿಚಯ ಮಾಲಿಕೆ- 10

# ಸೀಮೆ ಹುಣಸೆ

## - ನಮ್ಮದೇ ಆದ ವಿದೇಶೀ ಸಸ್ಯ

ಹೆಸರೇ ಹೇಳುವಂತೆ ಇದು ಸೀಮೆ ಹುಣಸೆ, ಇದು ನಮ್ಮದಲ್ಲದ್ದು. ದಕ್ಷಿಣ ಅಮೇರಿಕ ಮೂಲದ ಈ ಸಸ್ಯವನ್ನು ಐರೋಪ್ಯರು ಭಾರತಕ್ಕೆ ತಂದದ್ದರಿಂದ ವಿಲಾಯಿತಿ ಹುಣಸೆ ಎಂದು ಕರೆಯಲ್ಪಡುವ ಈ ಸಸ್ಯವು ಆಡುಭಾಷೆಯಲ್ಲಿ ಇಲಾಚಿ ಹುಣಸೆ, ದೊರಹುಣಸೆ ಎಂತಲೂ ಪರಿಚಿತವಾಗಿದೆ.

ಪಿಥೆಸೆಲ್ಲೊಬಿಯಮ್ ಡಲ್ಸ್ ಎಂಬ ವೈಜ್ಞಾನಿಕ ಹೆಸರಿನ ಈ ಸಸ್ಯವು ಲೆಗ್ಯೂಮಿನೇಸೀ ಫ್ಯಾಬ್ಯುಸೆ ಎಂಬ ಪ್ರಭೇದಕ್ಕೆ ಸೇರಿದೆ. ಮುಳ್ಳುಗಳುಳ್ಳ ರೆಂಬೆ ಕೊಂಬೆಗಳಿರುವುದರಿಂದ ಇದನ್ನು ಮದ್ರಾಸ್ ಥಾರ್ನ್ ಎಂತಲೂ ಕರೆಯುತ್ತಾರೆ. ಮನಿಲಾ ಟ್ಯಾಮರಿಂಡ್ ಎಂಬ ಹೆಸರು ಹೆಚ್ಚು ಜನಪ್ರಿಯವಾಗಿದೆ.

### ಸ್ವರೂಪ

ನೋಡುವುದಕ್ಕೆ ಹುಣಸೆ ಕಾಯಿಯನ್ನೇ ಹೋಲುತ್ತಿದ್ದರೂ, ಇದರ ಮೇಲು ಹೊದಿಕೆ ಅಥವಾ ಸಿಪ್ಪೆಯು ಹುಣಸೆಗಿಂತ ಭಿನ್ನವಾಗಿರುತ್ತದೆ. ಸಿಪ್ಪೆಯನ್ನು ಸುಲಿದರೆ ಒಳಗೆ ಕೊಬ್ಬರಿಯಂತೆ ತೆಳುವಾಗಿರುವ ತಿರುಳು ಕಾಣಿಸುತ್ತದೆ. ಈ ತಿರುಳು ತುಸು ಒಗರು, ಸಿಹಿಮಿಶ್ರಿತ-ಸಪ್ಪೆ ಎರಡರ ಹದವಾದ ಮಿಶ್ರ ರುಚಿಯನ್ನು ಹೊಂದಿದ್ದು ತನ್ನದೇ ಆದ ಪರಿಮಳವನ್ನೂ ಹೊಂದಿರುತ್ತದೆ.

ಸೀಮೆ ಹುಣಸೆ ಮರವು ಸಾಮಾನ್ಯವಾಗಿ 5ರಿಂದ 15 ಮೀಟರ್ ಎತ್ತರದವರೆಗೂ ಬೆಳೆಯುತ್ತದೆ. ರೆಂಬೆ-ಕೊಂಬೆಗಳು ಹತ್ತಿಪ್ಪತ್ತು ಮೀಟರ್ ಅಗಲಕ್ಕೂ ಹಬ್ಬಬಲ್ಲವು. ಹಾಗಾಗಿ ಮರದಿಂದ ಉದುರುವ ಎಲೆ, ಹೂಗಳು ಗೊಬ್ಬರವಾಗಿ ಚದುರಲು ಸಹಾಯವಾಗುತ್ತದೆ. ಎತ್ತರಕ್ಕೆ ಹೋದಂತೆ ಹರಡುವ ರೆಂಬೆಗಳನ್ನು ಸರಿಯಾಗಿ ಕತ್ತರಿಸುತ್ತ ಬೆಳೆಸುವುದರಿಂದ ತೋಟಗಳಿಗೆ, ಹೊಲಗದ್ದೆಗಳಿಗೆ ಜೈವಿಕ ಬೇಲಿಯಾಗಿ ಮತ್ತು ಜಮೀನು ಮತ್ತು ಉದ್ಯಾನವನಗಳಿಗೆ ಆವರಣವಾಗಿ ಬಳಸಲು ಬಹಳ ಯೋಗ್ಯವಾಗಿದೆ. ಕತ್ತರಿಸಿದ ಎಲೆ-ಟೊಂಗೆಗಳನ್ನು ಹಾಗೆಯೇ ಎಲೆಗೊಬ್ಬರವಾಗಿ ಬಳಸಬಹುದು. ಎಲೆಗಳು ಉದುರುತ್ತಲೇ ಮತ್ತೆ ಮತ್ತೆ ಚಿಗುರುವ ಸೀಮೆ ಹುಣಸೆಯು ಸದಾ ಹಸಿರಿನ ವಾತಾವರಣವನ್ನು ನಿರ್ಮಿಸುತ್ತದೆ.





### ಔಷಧೀಯ ಪ್ರಯೋಜನಗಳು

ಸೀಮೆ ಹುಣಸೆಯು ಒಳ್ಳೆಯ ರುಚಿಯ ಜೊತೆಗೆ ಔಷಧಿಯ ಗುಣಗಳನ್ನೂ ಹೊಂದಿದೆ. ಇದು ದೊಡ್ಡವರು, ಚಿಕ್ಕವರೆನ್ನದೇ ಯಾರು ಬೇಕಾದರೂ ಸುಲಭವಾಗಿ ಸೇವಿಸಬಹುದಾದ ಹಣ್ಣು.

- ಸೀಮೆ ಹುಣಸೆ ಹಣ್ಣಿನಲ್ಲಿ ವಿಟಮಿನ್ ಬಿ ಅಂಶವು ಹೇರಳವಾಗಿ ಇರುತ್ತದೆ, ಇದನ್ನು ನಿಯಮಿತವಾಗಿ ಸೇವಿಸುವುದರಿಂದ ರೋಗ ಪ್ರತಿರೋಧಕ ಶಕ್ತಿ ಶೀಘ್ರವಾಗಿ ವರ್ಧಿಸುತ್ತದೆ ಎಂದು ಹೇಳಲಾಗಿದೆ. ಮಕ್ಕಳಲ್ಲಿ ಜ್ಞಾಪಕ ಶಕ್ತಿ ಹೆಚ್ಚಲೂ ಇದು ಸಹಾಯಕಾರಿ.
- ಇದರಲ್ಲಿ ಪ್ರೋಟೀನ್, ಕಾರ್ಬೋಹೈಡ್ರೇಟ್, ಕ್ಯಾಲ್ಸಿಯಂ, ಕಬ್ಬಿಣ, ಸೋಡಿಯಂ, ವಿಟಮಿನ್ ಎ, ಬಿ ಮತ್ತು ಸಿ ಹೇರಳವಾಗಿ ದೊರೆಯುತ್ತವೆ.
- ಈ ಹಣ್ಣಿನ ಸೇವನೆಯಿಂದ ದೃಷ್ಟಿ ದೋಷ ನಿವಾರಣೆಯಾಗುತ್ತದೆ. ಹಾಗೂ ಕಣ್ಣಿನ ಉರಿ ಕೂಡ ನಿವಾರಣೆ ಮಾಡುವಲ್ಲಿ ನೆರವಾಗುತ್ತದೆ.
- ದೇಹದಲ್ಲಿ ರಕ್ತ ಪರಿಚಲನೆ ಕ್ರಿಯೆ ಸರಾಗವಾಗುತ್ತದೆ. ಪಾರ್ಶ್ವವಾಯು ರೋಗವನ್ನು ಬರೆದಂತೆ ತಡೆಗಟ್ಟುತ್ತದೆ.
- ಮಾನಸಿಕ ಒತ್ತಡವನ್ನು ಕೂಡ ಕಡಿಮೆ ಮಾಡುತ್ತದೆ.
- ಸಸ್ಯದ ವಿವಿಧ ಭಾಗಗಳನ್ನು ರಕ್ತಸ್ರಾವ, ದೀರ್ಘಕಾಲದ ಅತಿಸಾರ, ಮತ್ತು ಕ್ಷಯರೋಗಗಳಿಗೆ ಔಷಧವಾಗಿ ಬಳಸಲಾಗುತ್ತದೆ.
- ಕಣ್ಣಿನ ಉರಿಯೂತ, ಹಲ್ಲುನೋವು ಮತ್ತು ಕ್ಯಾನ್ಸರ್ ರೋಗಕ್ಕೆ ಚಿಕಿತ್ಸೆ ನೀಡಲು ಮರದ ವಿವಿಧ ಭಾಗಗಳನ್ನು ಬಳಸುತ್ತಾರೆ.

### ಇತರ ಉಪಯೋಗಗಳು

ಸೀಮೆ ಹುಣಸೆ ಕಾಯಿಯನ್ನು ಹಾಗೆಯೇ ತಿನ್ನಲೂ ಬಹುದು, ತಿರುಳಿನಿಂದ ಪಾನೀಯವನ್ನೂ ತಯಾರಿಸಬಹುದು. ಬಗೆಬಗೆಯ ತಿನಿಸುಗಳಲ್ಲಿ ಕೊಬ್ಬರಿಯಂತೆ ಇದರ ತಿರುಳನ್ನು ಬಳಸಬಹುದು. ಬೀಜಗಳಿಂದ ಚಟ್ನಿ ತಯಾರಿಸಬಹುದು, ಎಣ್ಣೆ ತೆಗೆಯಬಹುದು. ತೊಗಟೆಯಿಂದ ಕಷಾಯ ಮಾಡಿ ಸೇವಿಸಬಹುದು. ಹೂವುಗಳು ಹೇರಳವಾಗಿದ್ದು ಆಕರ್ಷಕವಾಗಿರುವುದರಿಂದ ಜೇನುಸಾಕಣೆಗೆ ಸಹಾಯಕಾರಿ. ಮರದ ಕಾಂಡವನ್ನು ಕೃಷಿ ಉಪಕರಣಗಳ ತಯಾರಿಕೆಗೆ ಬಳಸಬಹುದು. ಉರುವಲಾಗಿಯೂ ಬಳಸಬಹುದು. ಇದರ ಎಲೆಗಳಿಂದ ಒಳ್ಳೆಯ ಕಾಂಪೋಸ್ಟ್ ಗೊಬ್ಬರ ತಯಾರಿಸಬಹುದು.

ಇಂತಹ ಬಹೂಪಯೋಗಿ ಸಸ್ಯವು ನಮ್ಮ ಗ್ರಾಮೀಣ ಪರಿಸರದ ಭಾಗವಾಗಿರುವುದು ಅಗತ್ಯ. ●



ಛಾಯಾ ಓಕ್ ಬಾಪಟ್

ಅನಂತಪಥ

ಅನಂತಪಥ ಮಾಸಪತ್ರಿಕೆಯು ಪ್ರತಿ ತಿಂಗಳ 22ನೆಯ ತಾರೀಕು ತಪ್ಪದೆ ಪ್ರಕಟವಾಗುತ್ತಿದೆ. ಈ ಪತ್ರಿಕೆಯ ಚಂದಾದಾರರಾಗಿ ಅನಂತಕುಮಾರ್ ಪ್ರತಿಷ್ಠಾನದ ಸೇವಾಚಟುವಟಿಕೆಗಳನ್ನು ಪ್ರೋತ್ಸಾಹಿಸಿ.

ರೂ. 1000 ನೀಡಿ ಚಂದಾದಾರರಾಗಲು ಮತ್ತು ಇತರ ವಿವರಗಳಿಗೆ ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ: **8884182415**

ವ್ಯಕ್ತಿ ವಿಶೇಷ ಮಾಲಿಕೆ

# ಆದಿವಾಸಿ ಸ್ವಾತಂತ್ರ್ಯ ಹೋರಾಟಗಾರ - ಭಗವಾನ್ ಬಿರ್ಸಾ ಮುಂಡಾ

ಮಾನ್ಯ ಶ್ರೀ ಅನಂತಕುಮಾರರು 1998-99 ರಲ್ಲಿ ನಾಗರಿಕ ವಿಮಾನಯಾನ ಖಾತೆಯ ಕೇಂದ್ರ ಸಚಿವರಾಗಿದ್ದಾಗ ಭಾರತದ ಎಲ್ಲ ವಿಮಾನ ನಿಲ್ದಾಣಗಳಿಗೆ ಆಯಾ ಪ್ರದೇಶಗಳ ಇತಿಹಾಸ ಪುರುಷರ ಹೆಸರುಗಳನ್ನು ಇಡುವ ನಿರ್ಧಾರವನ್ನು ಪ್ರಕಟಿಸಿದ್ದರು. ಇದೇ ನಿರ್ಧಾರಕ್ಕನುಗುಣವಾಗಿ 27/05/2000 ರಂದು ರಾಂಚಿಯ ವಿಮಾನ ನಿಲ್ದಾಣಕ್ಕೆ ಬಿರ್ಸಾ ಮುಂಡಾ ಎಂದು ಹೆಸರಿಟ್ಟಾಗ ಇಡೀ ಭಾರತದ ಜನತೆ "ಈ ಬಿರ್ಸಾ ಮುಂಡಾ ಯಾರು?" ಎಂದು ಕುತೂಹಲ ತಳೆಯುವಂತಾಯಿತು. ಅಲ್ಲಿಗೆ ಅನಂತಕುಮಾರರ ನಿರ್ಧಾರ ಸಾರ್ಥಕವಾಯಿತು.

ಬಿರ್ಸಾ ಮುಂಡಾ ಹುಟ್ಟಿದ್ದು ಇಂದಿನ ಝಾರ್ಖಂಡ್ ರಾಜ್ಯದ ಖುಂಟಿ ಜಿಲ್ಲೆಯಲ್ಲಿರುವ ಉಲಿಹಾತು ಎಂಬ ಪುಟ್ಟ ಗ್ರಾಮದಲ್ಲಿ, ಮುಂಡಾ ಜನಾಂಗದಲ್ಲಿ ಬಿರ್ಸಾ ಎಂದರೆ ಗುರುವಾರ. ಅವನು ಹುಟ್ಟಿದ ವಾರದ ಹೆಸರನ್ನೇ ಅವನಿಗೆ ಇಡಲಾಗಿತ್ತು. ಬಿರ್ಸಾ ಹುಟ್ಟಿದ್ದು 18/07/1872 ರಲ್ಲಿ; ಮರಣಿಸಿದ್ದು 09/06/1900 ರಂದು ಬ್ರಿಟಿಷರ ವಿಚಾರಣಾಧೀನ ಸೆರೆಯಲ್ಲಿದ್ದಾಗ ಎಂದು ಸರಕಾರಿ ದಾಖಲೆಗಳು ಹೇಳುತ್ತವೆ. 28 ವರ್ಷಗಳ ಪುಟ್ಟ ಜೀವಿತದಲ್ಲಿಯೇ "ಭಗವಾನ್" ಪಟ್ಟಕ್ಕೇರಿದ ಈ ಮಹಾನುಭಾವನ ಚರಿತ್ರೆ ರೋಚಕ; ತಮ್ಮ ಹಕ್ಕುಗಳ ಸ್ಥಾಪನೆಗಾಗಿ ಹೋರಾಡುವ ಸ್ವಾಭಿಮಾನಿಗಳಿಗೆ ಸ್ಫೂರ್ತಿಯ ಚಿಲುಮೆ.

ಇಂದಿನ ಜಾರ್ಖಂಡ್, ಒರಿಸ್ಸಾ, ಛತ್ತೀಸಗಡ, ಪಶ್ಚಿಮ ಬಂಗಾಳದ ಭಾಗಗಳನ್ನು ಒಳಗೊಂಡ ವಿಶಾಲವಾದ ಭೂಭಾಗವು ಬುಡಕಟ್ಟು ಜನಾಂಗದ ನೆಲೆಯಾಗಿದೆ. ಪ್ರಕೃತಿಯನ್ನು ಆರಾಧಿಸುವ ಈ ಜನರು ಮಿಶನರಿಗಳ ಆಗಮನಕ್ಕೆ ಮೊದಲು ಕಾಡುಗಳಲ್ಲಿ ಸ್ವಾಭಾವಿಕವಾಗಿ ದೊರೆಯುವ ಉತ್ಪನ್ನಗಳನ್ನೇ ಬಳಸುತ್ತಿದ್ದರು. ಅಷ್ಟಿಷ್ಟು ಕಾಡುಗಳನ್ನು ಕಡಿದು ಕೃಷಿ ಭೂಮಿಯನ್ನಾಗಿ ಪರಿವರ್ತಿಸಿಕೊಂಡು ಸಾಮೂಹಿಕ ದುಡಿಮೆಯಿಂದ ಬದುಕುತ್ತಿದ್ದರು. ಆದರೆ ಪ್ರಕೃತಿ ಸಂಪತ್ತಿನ ಮೇಲೆ ಕಣ್ಣಿಟ್ಟ ಬ್ರಿಟಿಷರು, ಆದಿವಾಸಿಗಳ ಮೇಲೆ ತೆರಿಗೆಯ ಭಾರವನ್ನು ಹೇರತೊಡಗಿದರು. ಬುಡಕಟ್ಟಿನ ಜನಾಂಗಕ್ಕೆ ಅರಣ್ಯದ ಹಕ್ಕುಗಳನ್ನು ನಿರಾಕರಿಸಿ ಆದಿವಾಸಿಗಳನ್ನು ಒಕ್ಕಲೆಬ್ಬಿಸತೊಡಗಿದರು. ತಮ್ಮ ನೆಲೆಗಳನ್ನು ಜಮೀನ್ದಾರರು ಆಕ್ರಮಿಸಿಕೊಂಡ ಪರಿಣಾಮವಾಗಿ, ಆದಿವಾಸಿಗಳು ಅಲೆಮಾರಿಗಳಾಗಿಯೋ ಜೀತದಾಳುಗಳಾಗಿಯೋ ದುಡಿಯಬೇಕಾಯಿತು. ಬುಡಕಟ್ಟು ಜನರನ್ನು ಮಿಶನರಿಗಳು ಅಗಾಧ ಪ್ರಮಾಣದಲ್ಲಿ ಮತಾಂತರಗೊಳಿಸತೊಡಗಿದರು.

ಹೀಗೆ ಕ್ರೈಸ್ತ ಮತಕ್ಕೆ ಮತಾಂತರಗೊಂಡಿದ್ದವರಲ್ಲಿ ಬಿರ್ಸಾನ ತಂದೆ ಸುಗನಾ ಮುಂಡಾ ಮತ್ತು ತಾಯಿ ಕರ್ಮಿ ಹಾಟು ರವರೂ ಸೇರಿದ್ದರು. ಬಿರ್ಸಾನನ್ನು ಬುರ್ಜ್ ಎಂಬಲ್ಲಿ ಜರ್ಮನ್ ಶಾಲೆಗೆ ಸೇರಿಸುವಾಗ ಅವನ ಹೆಸರು ಬಿರ್ಸಾ ಡೇವಿಡ್ ಎಂದಿತ್ತು. ಈ ಹೊತ್ತಿಗಾಗಲೇ ಬಾಲಕ ಬಿರ್ಸಾ ತನ್ನ ಜನಾಂಗದ ಜನರ ದುರವಸ್ಥೆಯ ಬಗ್ಗೆ ಅರಿವು ಮೂಡಿಸಿಕೊಂಡಿದ್ದ. ಒಮ್ಮೆ ಅವರ ಶಾಲೆಯಲ್ಲಿ ಜರ್ಮನ್ ಶಿಕ್ಷಕನೊಬ್ಬ ಮುಂಡಾ ಜನಾಂಗದ ಬಗ್ಗೆ ಅವಹೇಳನಕಾರಿ ಮಾತುಗಳನ್ನು ಪದೇ ಪದೇ ಹೇಳಿದಾಗ ಸಿಟ್ಟಿಗೆದ್ದ ಬಾಲಕ ಬಿರ್ಸಾ, ಅವರನ್ನೂ ಮಿಶನರಿಗಳನ್ನೂ ತನ್ನ ತೀಕ್ಷ್ಣವಾದ ಮಾತುಗಳಿಂದ ಟೀಕಿಸಿದ. ಪರಿಣಾಮವಾಗಿ ಬಿರ್ಸಾನನ್ನು ಶಾಲೆಯಿಂದ ಉಚ್ಚಾಟಿಸಲಾಯಿತು. ಬಿರ್ಸಾ ಉದ್ಯೋಗವನ್ನು ಅರಸಿಕೊಂಡು ಊರೂರು ಅಲೆಯುತ್ತಿದ್ದಾಗ ತನ್ನ ಜನಾಂಗದ ದಯನೀಯ ಸ್ಥಿತಿ ಅವನ ಅರಿವಿಗೆ ಬಂದಿತು.

ಸುಮಾರು 1890ರಲ್ಲಿ ಬಂದ್‌ಗಾಂವ್ ನಲ್ಲಿ ಬಿರ್ಸಾಗೆ ಒಬ್ಬ ವೈಷ್ಣವ ಸನ್ಯಾಸಿಯ ಸಂಪರ್ಕವಾಯಿತು. ಅವರಿಂದ ರಾಮಾಯಣ, ಮಹಾಭಾರತ ಮತ್ತಿತರ ಪುರಾಣಗಳು, ಹಿಂದೂ ಧರ್ಮದ ತತ್ವಗಳನ್ನು ಅಧ್ಯಯನ ಮಾಡಿದ ಬಿರ್ಸಾ ತನ್ನ ಕುಟುಂಬದ ಜೊತೆ ಮತ್ತೆ ಮಾತೃಧರ್ಮಕ್ಕೆ ಮರಳಿದರು. ಮಾಂಸಾಹಾರವನ್ನು ತ್ಯಜಿಸಿ, ಕಾವಿ ಬಟ್ಟೆಯನ್ನು ಧರಿಸಲಾರಂಭಿಸಿದರು. ಮುಂಡಾ ಜನಾಂಗವು ಮಿಶನರಿಗಳ ಕುತಂತ್ರಕ್ಕೆ ಬಲಿಯಾಗುವುದನ್ನು ತಪ್ಪಿಸಲು ಮುಂಡಾ ಸಮುದಾಯಕ್ಕೆ ಒಂದು ಧಾರ್ಮಿಕ ಚೌಕಟ್ಟನ್ನು ನಿರ್ಮಿಸಿ ಅದನ್ನು ಬಿರ್ಸಾಯತ್ ಧರ್ಮ ಎಂದು ಕರೆದರು. ತಮ್ಮ ಧರ್ಮಕ್ಕೆ ವಿಧಿನಿಷೇಧಗಳನ್ನು ರಚಿಸಿದರು. ಅದರಂತೆ ಜನರು ತುಲಸಿ, ಗಿಡಮರಗಳು, ಬೆಟ್ಟಗುಡ್ಡಗಳನ್ನೇ ದೇವರೆಂದು ಪೂಜಿಸತೊಡಗಿದರು. ಮಾಂಸಮದ್ಯಗಳನ್ನು ತ್ಯಜಿಸಿದರು. ಬಿರ್ಸಾ ತಮ್ಮ ಜನಾಂಗದ ಜೀವನ ಸುಧಾರಣೆಗೆ ಅಗತ್ಯವಾದ ಕ್ರಮಗಳ ಬಗ್ಗೆ ವ್ಯಾಪಕವಾಗಿ ಬೋಧನೆ ನಡೆಸಿದರು. ಅಲೆಮಾರಿ ಜೀವನ ತೊರೆದು ಒಂದೆಡೆ ನೆಲೆನಿಂತು ಕೃಷಿಯಲ್ಲಿ ನಿರತರಾಗುವಂತೆ ಜನರ ಮನವೊಲಿಸಿದರು.

ಆಂಗ್ಲ ಸರಕಾರವು 1882 ರಲ್ಲಿ ಅರಣ್ಯ ಸಂರಕ್ಷಣಾ ಕಾಯಿದೆ ಜಾರಿಗೆ ತಂದು ಆದಿವಾಸಿಗಳಿಗೆ ಅರಣ್ಯದ ಪ್ರವೇಶವನ್ನೇ ನಿರಾಕರಿಸಿತು. ಇದನ್ನು ಪ್ರತಿಭಟಿಸಿದ ಆದಿವಾಸಿಗಳು ವ್ಯಾಪಕವಾಗಿ ಹೋರಾಟ ನಡೆಸಿದರು. ಚೈಬಾಸಾದಲ್ಲಿ ನಡೆದ ಸರ್ದಾರೀ ಆಂದೋಲನದಲ್ಲಿ ಬಿರ್ಸಾ ನೇರವಾಗಿ ಭಾಗವಹಿಸಿದರು. 1893-94 ರಲ್ಲಿ ಛೋಟಾ ನಾಗಪುರದಲ್ಲಿ ಅಧಿಕಾರಿಗಳು ಆದಿವಾಸಿಗಳನ್ನು ಒಟ್ಟಾಗಿ



ಒಕ್ಕಲೆಬ್ಬಿಸ ತೊಡಗಿದಾಗ ಅವರ ಪರವಾಗಿ ಬಿರ್ಸಾ ಬ್ರಿಟಿಷ್ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಲಿಲ್ಲ.

ಬುಡಕಟ್ಟು ಜನರ ಜೀವನ ಮತ್ತು ಸಂಸ್ಕೃತಿಯ ಮೇಲಿನ ದಾಳಿಯ ಸಮಸ್ಯೆಗಳಿಗೆ ಸ್ಪಂದಿಸಿದ ಬಿರ್ಸಾ ಚಳವಳಿಯ ಸರಣಿಯನ್ನು ಸಂಘಟಿಸಿದರು. ತಾವು ವಾಸಿಸುತ್ತಿದ್ದ ಭೂಮಿಗೆ ತಾವೇ ಒಡೆಯರು, ತಾವು ಯಾರಿಗೂ ತೆರಿಗೆ ನೀಡಬೇಕಾಗಿಲ್ಲ, "ವಿಕ್ಟೋರಿಯಾ ರಾಣಿಯ ಆಳ್ವಿಕೆ ಮುಗಿಯಿತು, ಮುಂಡಾ ರಾಜ್ಯಭಾರ ಪ್ರಾರಂಭವಾಗಿದೆ" ಎಂಬ ಘೋಷಣೆ ಎಲ್ಲೆಡೆ ಮೊಳಗಿತು. ಬಿರ್ಸಾ ಮನೆಯ ಮುಂದೆ ಸಾವಿರಾರು ಆದಿವಾಸಿ ಕೂಲಿ ಕಾರ್ಮಿಕರು ಪ್ರತಿನಿತ್ಯ ನೆರೆಯ ತೊಡಗಿದರು.

ಅಗಸ್ಟ್24, 1895ರ ಮಧ್ಯರಾತ್ರಿಯಲ್ಲಿ "ಬ್ರಿಟಿಷ್ ಸರಕಾರದ ಯಾವುದೇ ಆಜ್ಞೆ ಇಲ್ಲಿ ನಡೆಯುವುದಿಲ್ಲ" ಎಂದು ಘೋಷಿಸಿದ ಬಿರ್ಸಾ ಒಂದು ಬೃಹತ್ ಚಳವಳಿಗೆ ಕರೆನೀಡಿದರು. ಚಿಂತೆಗೊಳಗಾದ ಬ್ರಿಟಿಷರು, ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಜನರನ್ನು ಕೊಲ್ಲಲು ಬಿರ್ಸಾ ಹಂಚಿಕೆ ಹೂಡಿದ್ದಾನೆಂದು ಅಪಪ್ರಚಾರ ಪ್ರಾರಂಭಿಸಿದರು. ಕೆಲವು ದೇಶದ್ರೋಹಿಗಳು ನೀಡಿದ ಸುಳಿವಿನ ಮೇರೆಗೆ 19/11/1895ರಂದು ರಾತ್ರೋರಾತ್ರಿ ದಾಳಿಮಾಡಿ ಪೊಲೀಸರು ಬಿರ್ಸಾರನ್ನು ಬಂಧಿಸಿದರು; ಎರಡು ವರ್ಷಗಳ ಕಠಿಣ ಸಜೆ ವಿಧಿಸಿ ಹಜಾರಿಬಾಗ್ ಸೆರೆಮನೆಯಲ್ಲಿಟ್ಟರು.

ಸೆರೆವಾಸದ ನಂತರ ಬಿರ್ಸಾ ಜಗನ್ನಾಥಪುರದ ದೇವಾಲಯದಲ್ಲಿ ರಹಸ್ಯವಾಗಿ ಸಾಧನೆಯಲ್ಲಿ ನಿರತರಾದರು. 1899ರಲ್ಲಿ ಜನರ ಮುಂದೆ ಪ್ರತ್ಯಕ್ಷರಾದಾಗ ಜನರು ಅವರನ್ನು "ಧರತೀ ಆಬಾ (ಭೂಮಿಯ ತಂದೆ)", ಭಗವಾನ್ ಬಿರ್ಸಾ ಮುಂಡಾ ಎಂದು ಗುರುತಿಸಲು ಪ್ರಾರಂಭಿಸಿದರು. ಬಿರ್ಸಾರವರು ಬ್ರಿಟಿಷ್ ವಿರೋಧಿ ಹೋರಾಟದ ಜೊತೆಗೆ, ಬರಗಾಲ ಮತ್ತು ಸಾಂಕ್ರಾಮಿಕ ರೋಗಗಳಿಂದ ತತ್ತರಿಸಿ ಹೋಗಿದ್ದ ಜನರಿಗೆ ಸಾಂತ್ವನ ನೀಡುವ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು.

ಸಮಸ್ತ ಮುಂಡಾ ಸಮುದಾಯದೊಂದಿಗೆ ಬಿರ್ಸಾ ಬ್ರಿಟಿಷರ ವಿರುದ್ಧ ಗೆರಿಲ್ಲಾ ಯುದ್ಧತಂತ್ರವನ್ನು ಅನುಸರಿಸಿ ಅಂತಿಮ ಹೋರಾಟ ಪ್ರಾರಂಭಿಸಿದರು. ಜನವರಿ 1900ರಲ್ಲಿ ರಾಂಚಿಯಿಂದ 20 ಕಿಲೋಮೀಟರ್ ದೂರದ ಡುಂಬರಿ ಗುಡ್ಡದ ಮೇಲೆ ಮುಂಡಾಗಳು ಸಮಾವೇಶಗೊಂಡಿದ್ದರು. ಡುಂಬರಿ ಗುಡ್ಡವನ್ನು ಸುತ್ತುವರಿದ ಬ್ರಿಟಿಷ್ ಸೇನೆ ಜಲಿಯನ್ ವಾಲಾಬಾಗ್ ಮಾದರಿಯಲ್ಲಿ ಹತ್ಯಾಕಾಂಡ ನಡೆಸಿ ನೂರಾರು ಜನರನ್ನು ಹತ್ಯೆಗೈದು ಹೆಣಗಳನ್ನು ಕಮರಿಗೆ ಎಸೆಯಿತು. 03/03/1900 ರಂದು ಚಕ್ರಧರಪುರದ ಜಮ್ಕೋಪೈ ಕಾಡಿನಲ್ಲಿ ಬಿರ್ಸಾ ಸೆರೆಯಾದರು. 09/06/1900 ರಂದು ರಾಂಚಿಯ ಜೈಲಿನಲ್ಲಿ ನಿಗೂಢವಾದ ರೀತಿಯಲ್ಲಿ ಅವರ ದೇಹಾಂತ್ಯವಾಯಿತು.

ಬಿರ್ಸಾ ಮುಂಡಾ ನೇತೃತ್ವದ ಹೋರಾಟದ ಫಲವಾಗಿ 1908ರಲ್ಲಿ ಛೋಟಾ ನಾಗಪುರ ಹಿಡುವಳಿ ಕಾಯಿದೆ ಜಾರಿಗೆ ಬಂದು ಆದಿವಾಸಿಗಳ ಜಮೀನುಗಳನ್ನು ಇತರರು ಖರೀದಿಸುವುದನ್ನು ನಿಷೇಧಿಸಲಾಯಿತು. ಸಂಸತ್ ಭವನದಲ್ಲಿ ಇಂದು ಬಿರ್ಸಾ ಮುಂಡಾ ಛಾಯಾಚಿತ್ರ ರಾರಾಜಿಸುತ್ತಿದೆ. ಅನೇಕ ಸಂಸ್ಥೆಗಳಿಗೆ, ಶಾಲಾ ಕಾಲೇಜುಗಳಿಗೆ ಬಿರ್ಸಾ ಮುಂಡಾ ಹೆಸರಿಡಲಾಗಿದೆ. ಅವರ ಜೀವನ ಚರಿತ್ರೆಯನ್ನು ಬಿಂಬಿಸುವ ಚಲನಚಿತ್ರಗಳು, ಕಾದಂಬರಿಗಳು ರಚಿಸಲ್ಪಟ್ಟಿವೆ. ಕೇಂದ್ರ ಸರಕಾರವು ಅವರ ಜನ್ಮದಿನವನ್ನು "ಜನಜಾತೀಯ ಗೌರವ ದಿನ" ಎಂದು ಘೋಷಿಸಿದೆ. ●

**-ಕೆ.ಜನಾರ್ದನ ತುಂಗ**

# ಅದಮ್ಯಚೇತನ ತಿಂಗಳ ವರದಿ (15 ಜೂನ್ 2022 ರಿಂದ 15 ಜುಲೈ 2022)

ಅದಮ್ಯ ಚೇತನ ಹಾಗೂ ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಜು. 29 2003ರಲ್ಲಿ ಅನ್ನ-ಅಕ್ಷರ-ಆರೋಗ್ಯ ಎಂಬ ಘೋಷವಾಕ್ಯದೊಂದಿಗೆ ಪ್ರಾರಂಭಗೊಂಡು, ಅಂದಿನಿಂದ ಇಂದಿನವರೆಗೂ ಅದಮ್ಯ ಚೇತನ ಸಂಸ್ಥೆಯು ಈ ಮೂರು ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಾ ಬಂದಿದ್ದು, ಇಂದಿಗೆ 19 ವರ್ಷಗಳನ್ನು ಪೂರೈಸಿ 20ನೇ ವರ್ಷಕ್ಕೆ ಕಾಲಿಟ್ಟಿರುವುದು ಹೆಮ್ಮೆಯ ವಿಷಯ.

**ಅದಮ್ಯ ಚೇತನಕ್ಕೆ ಶ್ರೀಗಳ ಭೇಟಿ**

ಪವಿತ್ರ ಕ್ಷೇತ್ರ ಮಂತ್ರಾಲಯದ ಸ್ವಾಮಿಗಳಾದ ಶ್ರೀ ಶ್ರೀ ಸುಬುಧೇಂದ್ರ ತೀರ್ಥರು ಜೂ.26ರಂದು ಅದಮ್ಯ ಚೇತನಕ್ಕೆ ಚಿತ್ತೈಸಿದ್ದರು. ಅದಮ್ಯಚೇತನದ ಪರಿಸರಸ್ನೇಹಿ ಅಡುಗೆಮನೆಯ ಚಟುವಟಿಕೆಗಳನ್ನು ವೀಕ್ಷಿಸಿ ಶೂನ್ಯತ್ಯಾಜ್ಯ ವ್ಯವಸ್ಥೆಯ ಬಗೆಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ಮಾದರಿಯನ್ನು ಮಂತ್ರಾಲಯದ ಪಾಕಶಾಲೆಗಳಲ್ಲೂ ಅಳವಡಿಸಿಕೊಳ್ಳುವ ಬಗೆಗೆ ಅದಮ್ಯಚೇತನದ ಸಹಕಾರವನ್ನು ಶ್ರೀಗಳವರು ಅಪೇಕ್ಷಿಸಿರುತ್ತಾರೆ.

**ಹಸಿರು ಭಾನುವಾರ**

ಸಸ್ಯಾಗ್ರಹದ ಅಂಗವಾಗಿ ಅದಮ್ಯ ಚೇತನವು ಹಮ್ಮಿಕೊಳ್ಳುತ್ತಿರುವ ಹಸಿರು ಭಾನುವಾರ ಗಿಡ ನಡೆಯುವ ಕಾರ್ಯಕ್ರಮದಲ್ಲಿ ಪ್ರತಿವಾರವೂ ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲ ವರ್ಗದ ಜನರು ಭಾಗವಹಿಸುತ್ತಿದ್ದಾರೆ. ಅದರಂತೆ 339ನೇ ಹಸಿರು ಭಾನುವಾರದ ಕಾರ್ಯಕ್ರಮವನ್ನು ಎನ್ ಜಿ ಇ ಎಫ್ ಲೇಔಟ್ ಸಮೀಪದಲ್ಲಿರುವ ಬೆಂಗಳೂರು ವಿವಿ ಆವರಣದಲ್ಲಿ ನಡೆಯಿತು. 340ನೇ ಹಸಿರು ಭಾನುವಾರ ಕಾರ್ಯಕ್ರಮ ನಗರದ ಪೂರ್ಣಪ್ರಜ್ಞ ಲೇಔಟ್ ಸ್ವಯಂ ಸೇವಕರ ಸಹಯೋಗದಲ್ಲಿ ಜರುಗಿತು. 341ನೇ ಗಿಡ ನಡೆಯುವ ಕಾರ್ಯಕ್ರಮವನ್ನು ಕೆಂಪಾಂಬುಧಿ ಕೆರೆಯ ಸುತ್ತಮುತ್ತ ವಿದ್ಯಾರ್ಥಿಗಳು ಸಹದೊಂದಿಗೆ ಅದಮ್ಯ ಚೇತನ ನೆರವೇರಿಸಿತು. ಇದರ ಜೊತೆಗೆ ಅದಮ್ಯ ಚೇತನ ಸಂಸ್ಥೆಯ ಸಹಯೋಗದಲ್ಲಿ ಬಳ್ಳಾರಿ ಮತ್ತು ರಾಯಚೂರಿನಲ್ಲಿಯೂ ಸಹ ಸ್ವಯಂ ಸೇವಾ ಸಂಸ್ಥೆಯ ಕಾರ್ಯಕರ್ತರೊಂದಿಗೆ ಭಾನುವಾರ ಗಿಡ ನೆಡುವ ಕೆಲಸವನ್ನು ಮಾಡಲಾಯಿತು.

**ಮೈಕ್ರೋ ಪ್ಲಾಸ್ಟಿಕ್ ನಿಂದ ಪರಿಸರ ಹಾನಿ ಬಗ್ಗೆ ಜಾಗೃತಿ**

ಅನಂತ ಪ್ರೇರಣಾ ಕೇಂದ್ರದಲ್ಲಿ ಶಾಲಾ ಮಕ್ಕಳಿಗಾಗಿ ಅನಂತಕುಮಾರ್ ಅವರ ಜೀವನ ಶೈಲಿಯ ಪರಿಚಯ ಹಾಗೂ ಮೈಕ್ರೋ ಪ್ಲಾಸ್ಟಿಕ್ ಕುರಿತು ಕಾರ್ಯಾಗಾರ ನಿತ್ಯ ನಡೆಸಲಾಗುತ್ತಿದೆ. ಮೈಕ್ರೋ ಪ್ಲಾಸ್ಟಿಕ್‌ನಿಂದ ಪರಿಸರ ಮೇಲೆ ಉಂಟಾಗುತ್ತಿರುವ ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಮಾಡಲಾಗುತ್ತಿದೆ. ಈ ಮಾರ್ಗದಲ್ಲಿ ಶ್ರೀ ವೆಂಕಟೇಶ್ವರ ಹೈಸ್ಕೂಲ್ ಹೊಸಗುಡ್ಡದಹಳ್ಳಿ, ಶ್ರೀ ಸರಸ್ವತಿ ವಿದ್ಯಾನಿಕೇತನ ದೊಮ್ಮಸಂದ್ರ, ಉದಯ ಹೈಸ್ಕೂಲ್ ಚಿಕ್ಕಪೇಟೆ, ಶ್ರೀ. ರಾಜರಾಜೇಶ್ವರಿ ವಿದ್ಯಾಸಂಸ್ಥೆ ಗಾರ್ವೆಬಾವಿ ಪಾಳ್ಯ, ಸರ್ಕಾರಿ ಹೈಸ್ಕೂಲ್, ಸುಲ್ತಾನ್ ಪೇಟೆ, ಶ್ರೀ ಸರಸ್ವತಿ ಹೈಸ್ಕೂಲ್, ಚಾಮರಾಜಪೇಟೆ, ವಿವೇಕಾನಂದ ಹೈಸ್ಕೂಲ್, ವಿದ್ಯಾನಗರ, ಸರ್ಕಾರಿ ಹೈಸ್ಕೂಲ್, ಹೊಸಗುಡ್ಡದಹಳ್ಳಿ. ನ್ಯಾಷನಲ್ ಹೈಸ್ಕೂಲ್, ಬಸವನಗುಡಿ, ಸರ್ಕಾರಿ ಹೈಸ್ಕೂಲ್, ಬ್ಯಾಟರಾಯನಪುರ, ಶ್ರೀ ಶಾರದಾ ಹೈಸ್ಕೂಲ್, ಬ್ಯಾಟರಾಯನಪುರ ಸೇರಿದಂತೆ ಬೆಂಗಳೂರಿನ ವಿವಿಧ ಶಾಲಾ ಮಕ್ಕಳು ಅನಂತ ಪ್ರೇರಣಾ ಕೇಂದ್ರಕ್ಕೆ ಆಗಮಿಸಿ ಜ್ಞಾನ ವೃದ್ಧಿಸಿಕೊಂಡಿದ್ದಾರೆ. ಜೊತೆಗೆ ಭಾಗವಹಿಸಿದ ಮಕ್ಕಳಿಗೆ ಕಾರ್ಯಾಗಾರದ ಪ್ರಮಾಣ ಪತ್ರವನ್ನು ಪರಿಸರದ ಮೇಲೆ ನೀಡಲಾಗುತ್ತಿದೆ.

**ತಟ್ಟೆ ವಿತರಣೆ**

ಅದಮ್ಯ ಚೇತನ ಹಾಗೂ ಬಿಬಿಎಂಪಿ ಸಹಯೋಗದಲ್ಲಿ ಪೌರಕಾರ್ಮಿಕರಿಗೆ ಪ್ರತಿದಿನ ಊಟದ ವ್ಯವಸ್ಥೆ ಮಾಡುತ್ತಿದೆ. ಇದರ ಜೊತೆಗೆ ಅದಮ್ಯ ಚೇತನ ಮುಂದಿನ ಉಪಕ್ರಮವಾಗಿ ಕೆ.ಪಿ. ಅಗ್ರಹಾರ ಪೌರ ಕಾರ್ಮಿಕರಿಗೆ ಸ್ಟೀಲ್ ತಟ್ಟೆಗಳನ್ನು ವಿತರಿಸಿದೆ.

**ನಿತ್ಯ ಅನ್ನದಾನ**

ಅದಮ್ಯ ಚೇತನದ ನಿತ್ಯ ಅನ್ನದಾನ ಕಾರ್ಯಕ್ರಮಕ್ಕೆ ಅನುಗುಣವಾಗಿ, ಗವಿಪುರ, ಜಯನಗರ, ನಗರ್ತಪೇಟೆ ಮತ್ತು ಆರ್.ಆರ್. ನಗರಗಳಲ್ಲಿ ನಿತ್ಯ ಅನ್ನದಾನ ವ್ಯವಸ್ಥೆ ಇದೆ. ಸೌತ್ ಎಂಡ್ ವೃತ್ತದಲ್ಲಿರುವ ಅನಂತ ಪ್ರೇರಣಾ ಕೇಂದ್ರದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ ಪ್ರಾರಂಭಿಸಲಾಗಿದೆ.

**ಇತರೆ ಚಟುವಟಿಕೆಗಳು**

ಅದಮ್ಯ ಚೇತನದ ಬೆಂಗಳೂರಿನ ಅನ್ನಪೂರ್ಣ ಅಡುಗೆ ಮನೆಯಿಂದ ಪ್ರತಿ ದಿನ 260 ಶಾಲೆಗಳ ಮಕ್ಕಳಿಗೆ ಬಿಸಿಯೂಟ ಹಾಗೂ ಹಾಲು ವಿತರಿಸುತ್ತಿರುವುದು ಗೊತ್ತಿರುವ ವಿಷಯ. ಆದರೆ ಈಗ ಜೂ. 23ರಿಂದ ಪ್ರತಿ ಗುರುವಾರ ಹಾಲಿನ ಜೊತೆಗೆ ಪೌಷ್ಟಿಕಾಂಶಯುಕ್ತವಾದ ಚಾಕ್ಲೇಟ್ ಸುವಾಸನೆಯುಳ್ಳ ಪುಡಿಯನ್ನು ಹಾಲಿನೊಂದಿಗೆ ಕೊಡಲಾಗುತ್ತಿದೆ. ಅದಮ್ಯ ಚೇತನದಿಂದ ಶಾಲೆಗಳಿಗೆ ಬಿಸಿಯೂಟ ವಿತರಣೆ ಪೌಷ್ಟಿಕಾಂಶ ಯುಕ್ತ ಪುಡಿಯನ್ನು ಶ್ರೀ ಸತ್ಯಸಾಯಿ ಟ್ರಸ್ಟ್ ನವರ ಪ್ರಾಯೋಜಕತ್ವದಲ್ಲಿ ನೀಡಲಾಗುತ್ತಿದೆ.

**ಶ್ರೀ ಚೇತನ**

ಶ್ರೀ ಚೇತನ ಸಭೆಯನ್ನು ಈಗ ಕಳೆದ ಎರಡು ವರ್ಷಗಳಿಂದ ಗೂಗಲ್ ಮೀಟ್ ಜಾಲತಾಣದಲ್ಲಿ ನಡೆಸುತ್ತಿದ್ದು, ಪ್ರತಿ ಮಂಗಳವಾರ ಮಧ್ಯಾಹ್ನ 12 ಗಂಟೆಯಿಂದ 1.30 ವರೆಗೆ ನಡೆಯುವ ಈ ಸಭೆಯಲ್ಲಿ ಹಸಿರು ಹಾಡು ಪ್ರಾರ್ಥನೆಯಿಂದ ಪ್ರಾರಂಭ ಮಾಡಿ, ದೇಶಭಕ್ತಿ ಗೀತೆ, ಮಂಕು ತಿಮ್ಮನ ಕಗ್ಗ, ವಾರದ ಸುದ್ದಿ ಹಾಗು ಪ್ರತಿ ವಾರವೂ ಒಂದೊಂದು ಆರೋಗ್ಯಕರ ಅಡುಗೆಯ ಬಗ್ಗೆ ಪರಿಚಯ ಮಾಡಿ ಕೊಡುತ್ತಾರೆ.

**ಭಗವದ್ಗೀತೆ ಪಠಣ**

ಭಗವದ್ಗೀತೆಯ ಪಠಣದಲ್ಲಿ ಸತ್ಸಂಪ್ರದಾಯವನ್ನು ಅಳವಡಿಸಿಕೊಳ್ಳಲು ಸಹಕಾರಿಯಾಗಬೇಕೆಂಬ ದೃಷ್ಟಿಯಿಂದ ಪ್ರತಿ ಗುರುವಾರ ಸಂಜೆ 4 ಗಂಟೆಯಿಂದ 5 ಗಂಟೆಯವರೆಗೆ ಭಗವದ್ಗೀತೆಯ ಶ್ಲೋಕ ಪಠಣವನ್ನು ಅದಮ್ಯ ಚೇತನದ ಆವರಣದಲ್ಲಿ ನಡೆಸಲಾಗುತ್ತಿದೆ. ಕಾರ್ಯಕರ್ತರು ಸೀಮಿತ ಸಂಖ್ಯೆಯಲ್ಲಿ ಅದಮ್ಯ ಚೇತನದಲ್ಲಿ ಸೇರಿ ಸಾಮೂಹಿಕ ಭಗವದ್ಗೀತೆಯ ಪಠಣ, ನಂತರ ತರಕಾರಿ ಹೆಚ್ಚುವ ಕೆಲಸದಲ್ಲಿ ಕೈ ಜೋಡಿಸಿದ್ದರು. ಜೂ. 23 ರಂದು ನಡೆದ ಭಗವದ್ಗೀತ ಪಠಣದಲ್ಲಿ ಭಾರತೀಯ ಯೋಧರು ಪಾಲ್ಗೊಂಡಿದ್ದು ವಿಶೇಷವಾಗಿತ್ತು.

**ಪ್ಲೇಟ್ ಬ್ಯಾಂಕ್**

ಅದಮ್ಯ ಚೇತನ ಪ್ರಾರಂಭಿಸಿರುವ ಪ್ಲೇಟ್ ಬ್ಯಾಂಕ್ ಯೋಜನೆಗೆ ಎಲ್ಲೆಡೆ ಬೇಡಿಕೆಯಿದ್ದು, ಶೃಂಗೇರಿ ಶಂಕರ ಮಠದ ಕಾರ್ಯಕ್ರಮದಲ್ಲಿ ಪ್ರತಿ ದಿನ 5,000 ಜನರಿಗೆ ಊಟಕ್ಕೆ ಅದಮ್ಯ ಚೇತನದಿಂದ ಪ್ಲೇಟ್ ಬ್ಯಾಂಕ್ ಸೌಲಭ್ಯ ಒದಗಿಸಲಾಗಿತ್ತು. ಅದಮ್ಯ ಚೇತನ ಬೆಂಗಳೂರು, ಹಾಗೂ ಗ್ರೀನ್ ರಾಯಚೂರು ಸಹಯೋಗದೊಂದಿಗೆ ಜು. 6ರಂದು ರಾಯಚೂರಿನ ಎನ್.ಜಿ.ಓ. ಕಾಲೋನಿ ರೇಸ್ ಚಾಣಕ್ಯ ಶಾಲೆ ಆವರಣದಲ್ಲಿ ಡಾ. ತೇಜಸ್ವಿನಿ ಅನಂತಕುಮಾರ್ ಅವರು ಪ್ಲೇಟ್ ಬ್ಯಾಂಕ್ ಉದ್ಘಾಟನೆ ಮಾಡಿದರು.

ಅನಂತಪಥ

Editor: **Gopal T.S** I Assistance: **K. Janardhana Thunga** I Layout: **Ananthakumar Pratishthana**
Assistance: **Sanjay R / Trivikram Joshi / Madhumathi Kumbalur**
Inputs: **Poornaprajna I Sreelakshmi Vishwanath I Chaya Bapat I Srikanth K**
Photographs: **Adamya Chethana I Gopal TS I Chakrapani Kengeri I Internet Sources**
Sketch: **Rashmi Killedar** Printed at: **Rashtrothana Mudranalaya, Chamrajpet, Bengaluru**
Published by: **Dr. Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಅದಮ್ಯ ಸೇವಾ

( ಅದಮ್ಯ ಚೇತನ -ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಮಂತ್ರಾಲಯದ ಪೀಠಾಧಿಪತಿಗಳಾದ ಶ್ರೀ ಶ್ರೀ ಸುಬುಧೇಂದ್ರ ತೀರ್ಥಸ್ವಾಮೀಜಿಯವರು ಇತ್ತೀಚೆಗೆ ಅದಮ್ಯಚೇತನಕ್ಕೆ ಭೇಟಿನೀಡಿ ಇಲ್ಲಿಯ ಚಟುವಟಿಕೆಗಳನ್ನು ಪ್ರಶಂಸಿಸಿದರು.



ಅದಮ್ಯ ಚೇತನದಿಂದ ಬೆಂಗಳೂರು ವಿಭಾಗದ ಶಾಲಾಮಕ್ಕಳಿಗೆ ಚಾಕ್ಲೇಟ್ ಪ್ರೋಟಿನ್ ಭರಿತ ಹಾಲಿನ ವಿತರಣೆಯನ್ನು ಈಚೆಗೆ ಪ್ರಾರಂಭಿಸಲಾಗಿದೆ.





ಅನಂತಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡುವ ಶಾಲಾ ವಿದ್ಯಾರ್ಥಿಗಳಿಗೆ ಮೈಕ್ರೋಪ್ಲಾಸ್ಟಿಕ್ ಬಳಕೆಯಿಂದ ಆಗುತ್ತಿರುವ ಪರಿಸರಹಾನಿಯ ಬಗೆಗೆ ತಿಳುವಳಿಕೆ ನೀಡಲಾಗುತ್ತಿದೆ.








ಗ್ರೀನ್ ರಾಯಚೂರು ಸಂಘಟನೆಯ ಸಹಯೋಗದಲ್ಲಿ ಅದಮ್ಯ ಚೇತನವು ರಾಯಚೂರಿನಲ್ಲಿ ಪ್ಲೇಟ್ ಬ್ಯಾಂಕ್ ವ್ಯವಸ್ಥೆಯನ್ನು ಪ್ರಾರಂಭಿಸಿದೆ.



ಅದಮ್ಯಚೇತನದ ಹಸಿರು ಭಾನುವಾರ ಕಾರ್ಯಕ್ರಮಗಳಲ್ಲಿ ಹಿರಿಕಿರಿಯರೆನ್ನದೆ ನೂರಾರು ಜನರು ಉತ್ಸಾಹದಿಂದ ಗಿಡ ನೆಡುವ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದಾರೆ.




ಅದಮ್ಯ ಚೇತನ ಸಂಸ್ಥೆಯಲ್ಲಿ ಪ್ರತಿ ಗುರುವಾರ ಗೀತಾ ಪಠಣ ಕಾರ್ಯಕ್ರಮವು ನಿರಂತರವಾಗಿ ನಡೆಯುತ್ತಿದೆ.

## ಅನಂತ ಚಿತ್ರಸಂಪುಟ

ಜನನಾಯಕರ ಬಗೆಗಿನ ತಮ್ಮ ಪ್ರೀತಿಯನ್ನು ಕಾರ್ಯಕರ್ತರು ತೋರ್ಪಡಿಸಿಕೊಳ್ಳುವ ಹಲವು ಬಗೆಗಳಲ್ಲಿ , ನಾಯಕರಿಗೆ ತಮ್ಮ ಆಯ್ಕೆಯ ಶಿರೋಭೂಷಣವನ್ನು ತೊಡಿಸುವುದೂ ಒಂದು. ಈ ಶಿರೋಭೂಷಣ ಆಯಾ ಪ್ರದೇಶದ ವಿಶಿಷ್ಟ ತೊಡುಗೆಯಾಗಿರಬಹುದು, ಸಾಂಪ್ರದಾಯಿಕ ವೇಷದ ಒಂದು ಭಾಗವಾಗಿರಬಹುದು, ನಿರ್ದಿಷ್ಟ ಸಂಘಟನೆಯ ಸಮವಸ್ತ್ರದ ಅಂಶವೂ ಆಗಿರಬಹುದು. ಹವಾಗುಣದ ಅವಶ್ಯಕತೆಯೂ ಇದ್ದೀತು.  ಶ್ರೀ ಅನಂತಕುಮಾರ್ ಇಂತಹ ಹಲವು ಶಿರೋಭೂಷಣಗಳಲ್ಲಿ ಕಾಣಿಸಿಕೊಂಡಿದ್ದ ಕೆಲವು ಸಾಂದರ್ಭಿಕ ಚಿತ್ರಗಳನ್ನು ಈ ಚಿತ್ರಸಂಪುಟದಲ್ಲಿ ಸಂಗ್ರಹಿಸಿದೆ.